ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2022 ಮಾಸ ಪತ್ರಿಕೆ

ಸಂಪುಟ/Volume : 45
ಸಂಚಿಕೆ/Issue : 13
ಪುಟ/Pages : 3
ಬೆಲೆ/Price : ₹ 10/–

**Akhila Karnataka Shikshaka Samachar | December 2022 | Monthly**



## ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ

# 8ನೇ ರಾಷ್ಟ್ರೀಯ ಅಧಿವೇಶನ

## ಜನಸೇವಾ ವಿದ್ಯಾಕೇಂದ್ರ, ಚೆನ್ನೇನಹಳ್ಳಿ, ಬೆಂಗಳೂರು

A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಸಮಸ್ತ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರೆಲ್ಲರಿಗೂ ಅಭಿನಂದನೆಗಳು.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮಹತ್ತರ ಕಾರ್ಯಕ್ರಮವಾದ ಮತ್ತು ಮೂರು ವರ್ಷಗಳಿಗೊಮ್ಮೆ ನಡೆಯುವ ಅಧಿವೇಶನವನ್ನು ಬೆಂಗಳೂರಿನ ಚೆನ್ನೇನಹಳ್ಳಿಯ ಜನಸೇವಾವಿದ್ಯಾಕೇಂದ್ರದಲ್ಲಿ ಯಶಸ್ವಿಯಾಗಿ ನಡೆಸಿದ್ದಕ್ಕಾಗಿ ಈ ಅಭಿನಂದನೆ.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಈ ಬಾರಿಯ ಅಧಿವೇಶನವನ್ನು ಬೆಂಗಳೂರಿನಲ್ಲಿ ನಡೆಸುವುದೆಂದು ತೀರ್ಮಾನವಾದಾಗ ಕರ್ನಾಟಕದ ಕಾರ್ಯಕರ್ತರೆಲ್ಲರಿಗೂ ಒಂದು ರೀತಿಯಲ್ಲಿ ಸಂತೋಷ, ಆತಂಕ ಮತ್ತು ಅಧಿವೇಶನವನ್ನು ಹೇಗೆ ಯಶಸ್ವಿಯಾಗಿ ನಡೆಸಬೇಕೆಂಬ ಆತುರ, ಕಾತುರ ಎಲ್ಲಾ ಭಾವನೆಗಳು ಒಟ್ಟಿಗೆ ಪ್ರಾರಂಭವಾಗಿದ್ದವು. ನಂತರದ ದಿನಗಳಲ್ಲಿ ಪ್ರಮುಖರ ಗುಂಪು ತಯಾರಾಗಿತ್ತು. ಅಧಿವೇಶನಕ್ಕೆ ಸಂಬಂಧಿಸಿದ ರೂಪುರೇಷೆಗಳು ಗರಿಗೆದರಲು ಪ್ರಾರಂಭವಾಗಿದ್ದವು. ಮೊಟ್ಟ ಮೊದಲು ಪ್ರಮುಖರೆಲ್ಲರಿಗೂ ಕಾರ್ಯವಿಂಗಡಣೆ ಮಾಡಿಕೊಳ್ಳಲಾಯಿತು. ಕೇವಲ ಪ್ರಮುಖರ ಗುಂಪಿನಿಂದ ರಾಷ್ಟ್ರದಾದ್ಯಂತ ಸಂಘಟನೆಯ ಜವಾಬ್ದಾರಿ ಹೊತ್ತ ಸುಮಾರು ೩೦೦೦ ಕಾರ್ಯಕರ್ತರ ಮೂರು ದಿನಗಳ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು ಕಷ್ಟ ಮತ್ತು ರಾಜ್ಯದ ಮೂಲೆ ಮೂಲೆಯಲ್ಲಿರುವ ಕಾರ್ಯಕರ್ತರೆಲ್ಲರನ್ನು ಈ ಗುರುತರ ಕಾರ್ಯದಲ್ಲಿ ತೊಡಗಿಸಬೇಕೆಂಬ ಇಚ್ಛೆಯಿಂದ ಸುಮಾರು 12 ಪ್ರಮುಖ ವಿಭಾಗಗಳನ್ನು ಮಾಡಿ, ಪ್ರತಿಯೊಂದು ವಿಭಾಗದಲ್ಲಿಯೂ 12-13 ಸಹ ವಿಭಾಗಗಳನ್ನು ಮಾಡಿ ಪ್ರತಿ ವಿಭಾಗಕ್ಕೂ ಮತ್ತು ಸಹವಿಭಾಗಕ್ಕೂ ಪ್ರಮುಖರನ್ನು ಗುರುತಿಸುವ ಕೆಲಸ ಅತಿ ಚುರುಕಿನಿಂದ ನಡೆಯಿತು. ಹಳೆ ಬೇರು ಹೊಸ ಚಿಗುರು ಎನ್ನುವಂತೆ ಈ ಕೆಲಸಗಳಲ್ಲಿಯೂ ಹೊಸ ಕಾರ್ಯಕರ್ತರನ್ನು ತೊಡಗಿಸುವುದನ್ನು ನಮ್ಮ ಹಿರಿಯರು ಮರೆಯಲಿಲ್ಲ. ಕೊಟ್ಟ ಜವಾಬ್ದಾರಿಗಳನ್ನು ಅತಿ ಚುರುಕಿನಿಂದ ಹಾಗೂ ಅಚ್ಚುಕಟ್ಟಿನಿಂದ ನಿರ್ವಹಿಸಿದ ಕೀರ್ತಿಯೂ ನವ ಕಾರ್ಯಕರ್ತರಿಗೆ ಸಲ್ಲಬೇಕು. ಅಧಿವೇಶನವನ್ನು ಮಾಡುವ ನಿರ್ಧಾರ ಕೈಗೊಂಡಾಗಿನಿಂದ ತಿಂಗಳಿಗೊಮ್ಮೆ ಹಾಗೂ ಅಧಿವೇಶನಕ್ಕೆ ತಿಂಗಳ ಸಮಯ ಇರುವಾಗಿನಿಂದಲೇ ಪ್ರತಿದಿನ ರಾತ್ರಿ ಆನ್‌ಲೈನ್ ಸಭೆ, ಆಗಾಗ ಆಫ್‌ಲೈನ್ ಸಭೆ ಮಾಡುವುದರಿಂದಾಗಿ ಅಚ್ಚುಕಟ್ಟಾಗಿ ಅಧಿವೇಶನ ನಡೆಸಲು ಸಾಧ್ಯವಾಯಿತು. ತಿಂಗಳ ಮುಂಚೆಯೇ ಹಿರಿಯರೆಲ್ಲಾ ಸೇರಿ ಅಧಿವೇಶನದ ಸ್ಥಳ ಭೇಟಿ ಮಾಡಿ, ಪೂರ್ವ ಹಾಗೂ ಪೂರ್ಣ ಯೋಜನೆ ಮಾಡಿದರು. ಖುದ್ದಾಗಿ ಕೃ. ನರಹರಿಜೀಯವರೇ ಪ್ರಮುಖರ ಜೊತೆ ಬಂದು ಪ್ರತಿಯೊಂದು ಸ್ಥಳದ ವಿವರ, ಎಷ್ಟು ಕಾರ್ಯಕರ್ತರಿಗೆ ಸ್ಥಳಾವಕಾಶ ಮಾಡಬಹುದು? ಏನೇನೂ ವ್ಯವಸ್ಥೆಗಳನ್ನು ಮಾಡಬಹುದು? ಎಂಬುದನ್ನು ತೋರಿಸಿದ್ದು, ಪ್ರಮುಖರೆಲ್ಲರಿಗೂ ಅಧಿವೇಶನದ ತಯಾರಿಯಲ್ಲಿ ಉತ್ಸಾಹದಿಂದ ತೊಡಗಲು ಪ್ರೇರೇಪಿಸಿದಂತಾಗಿತ್ತು. ರಾಜ್ಯದ ಮೂಲೆ-ಮೂಲೆಗಳಿಂದ ತಮ್ಮ ವೃತ್ತಿ ಕಾರ್ಯಕ್ಕೆ ರಜೆ ನೀಡಿ, ಅಧಿವೇಶನದ ತಯಾರಿಯಲ್ಲಿ ಕಾರ್ಯಕರ್ತರು ತೊಡಗಿದ ರೀತಿ ಬೇರೆಯವರನ್ನು ಪ್ರೇರೇಪಿಸಿದ್ದಂತೂ ನಿಜ. ನಮ್ಮ ಸಂಘಟನೆಯಲ್ಲಿ ನೇರವಾಗಿ ತೊಡಗದೇ ಇರುವವರು ಸಹ ತಮ್ಮ ತನು, ಮನ ಮತ್ತು ಧನ ನೀಡಿದ್ದಂತೂ ಅದ್ಭುತ. ರಾಷ್ಟ್ರದ ಕಾರ್ಯಕರ್ತರ ಮುಂದೆ ಕರ್ನಾಟಕದ ಕೀರ್ತಿ ಹೆಚ್ಚಾಗಬೇಕು, ಬಂದಿರುವ ಅತಿಥಿಗಳಿಗೆ ಯಾವುದರಲ್ಲೂ ಕೊರತೆಯಾಗಬಾರದು ಎನ್ನುವ ಅವರ ಮನೋಭಾವನೆ ನಮಗೆಲ್ಲಾ ಸ್ಫೂರ್ತಿದಾಯಕವಾಗಿತ್ತು.

ಅಧಿವೇಶನದಲ್ಲಿ ವೇದಿಕೆ ನಿರ್ಮಾಣ ಮಾಡಬೇಕಾದವರು ಸಹ ಈ ಕಾರ್ಯವು ತಮ್ಮದೇ ಮನೆಯ ಕೆಲಸವೆಂದು ಮಾಡುವುದು ಸಹ ನಮಗೆ ಪ್ರೇರಣೆ ನೀಡಲು ಒಂದು ಕಾರಣವಾಗಿತ್ತೆಂದರೆ ತಪ್ಪಾಗಲಾರದು. ಅಧಿವೇಶನದ ಸಫಲತೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣರಾದ ಎಲ್ಲರ ಹೆಸರನ್ನು ಸ್ಮರಿಸುತ್ತಾ ಧನ್ಯವಾದ ಹೇಳುವುದು ಇಲ್ಲಿ ಅಸಾಧ್ಯವಾಗಿರಬಹುದು. ಆದ್ದರಿಂದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಪರವಾಗಿ ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರತಿಯೊಬ್ಬ ಕಾರ್ಯಕರ್ತರ ಕಡೆಯಿಂದ ಸಹಕರಿಸಿದ ಎಲ್ಲರಿಗೂ ಅನಂತಾನಂತ ಧನ್ಯವಾದಗಳು. ಈ ಅಧಿವೇಶನ ನಡೆಯಲು ಸ್ಥಳಾವಕಾಶ ನೀಡಿ ಸಹಕರಿಸಿದ ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿಯವರಿಗೆ ಮನಃಪೂರ್ವಕ ಧನ್ಯವಾದಗಳು.

ಈ ಸಂಚಿಕೆಯಲ್ಲಿ ಕೆಲವೇ ಕಾರ್ಯಕರ್ತರ ಅಧಿವೇಶನದ ಅನುಭವಗಳನ್ನು ಪ್ರಕಟಿಸಲಾಗಿದೆ. ಇನ್ನೂ ಕಳುಹಿಸದೆ ಇರುವವರು, ಕಳುಹಿಸಲು ಇಚ್ಛಿಸುವವರು ಜನವರಿ 5 ನೇ ದಿನಾಂಕದೊಳಗಾಗಿ ತಮ್ಮ ಅನುಭವವನ್ನು ಹಂಚಿಕೊಂಡರೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಸಂಪಾದಕ


## ಸಂಪಾದಕ ಮಂಡಳಿ

**ಗೌರವ ಸಂಪಾದಕರು**
ಹೆಚ್. ನಾಗಭೂಷಣರಾವ್

**ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು**
ಜೆ. ಎಮ್. ಜೋಶಿ

**ವ್ಯವಸ್ಥಾಪಕ ಸಂಪಾದಕರು**
ಸಂದೀಪ ಬೂದಿಹಾಳ

**ಗೌರವ ಸಲಹೆಗಾರರು**
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

**ಸಂಪಾದಕ ಮಂಡಳಿ**
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

**ವಿನ್ಯಾಸಕಾರರು**
ಪ್ರೇರಣಾ

**ಕಛೇರಿ ವ್ಯವಸ್ಥಾಪಕರು**
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- 8ನೇ ರಾಷ್ಟ್ರೀಯ ಅಧಿವೇಶನ ನಮಗೆಲ್ಲಾ ಪ್ರೇರಣಾದಾಯಕವಾಗಿದ್ದು ಹೀಗೆ... 3
- ಗೀತಾ ಜಯಂತಿ 6
- ಶಿಕ್ಷಾಭೂಷಣ ಪ್ರಶಸ್ತಿ ವಿಜೇತರು 7
- ಅಧಿವೇಶನದ ಬಗ್ಗೆ ಕಾರ್ಯಕರ್ತರ ಅನುಭವಗಳು 9
- 8ನೇ ರಾಷ್ಟ್ರೀಯ ಅಧಿವೇಶನದ ಚಿತ್ರಗಳು 11

# 8ನೇ ರಾಷ್ಟ್ರೀಯ ಅಧಿವೇಶನ ನಮಗೆಲ್ಲಾ ಪ್ರೇರಣಾದಾಯಕವಾಗಿದ್ದು ಹೀಗೆ...

**ಚಿದಾನಂದ್ ಆ ಕೇ ಪಾಟೀಲ್**
ರಾಜ್ಯ ಪ್ರಧಾನಕಾರ್ಯದರ್ಶಿ
ಕ.ರಾ.ಮಾ.ಶಿ.ಸಂ.



"ಕರ್ನಾಟಕಕ್ಕೆ ಧನ್ಯವಾದ, ಧನ್ಯವಾದ" ಎಂದು ಮಧ್ಯಪ್ರದೇಶದ ಕಾರ್ಯಕರ್ತರೊಬ್ಬರು ಊಟದ ಪೆಂಡಾಲಿನಲ್ಲಿದ್ದ ಮೈಕ್ ಹಿಡಿದು ಹೇಳಿದಾಗ ಅಲ್ಲಿದ್ದ ಕಾರ್ಯಕರ್ತರೆಲ್ಲರಿಗೂ ರೋಮಾಂಚನ ಮತ್ತು ಧನ್ಯತೆಯ ಭಾವಗಳೆರೆಡು ಒಮ್ಮೆಲೆ ಮೂಡಿದವು. ಈ ಘಟನೆಗೆ ಸಾಕ್ಷಿಯಾದದ್ದು 13ನೇ ನವೆಂಬರ್ ದ ಮಧ್ಯಾಹ್ನದ ಊಟದ ಮುಕ್ತಾಯದ ಸಮಯದಲ್ಲಿ. ಹೌದು ಜೀವನದಲ್ಲಿ ಅಪರೂಪದ ಮತ್ತು ಮತ್ತೆ ಸಿಗದ ಅನುಭವವನ್ನು ನೀಡಿದ ABRSM ರಾಷ್ಟ್ರೀಯ ಅಧಿವೇಶನಕ್ಕೆ ಕರ್ನಾಟಕದ ಕಾರ್ಯಕರ್ತರೆಲ್ಲರೂ ಒಂದು ಬಾರಿ ಧನ್ಯವಾದ ಹೇಳಲೇಬೇಕು. ಧನ್ಯವಾದ, ಧನ್ಯವಾದ.

ಒಂದು ವರ್ಷಗಳ ಹಿಂದಿನ ಮಾತು ಕರ್ನಾಟಕಕ್ಕೆ ABRSM ರಾಷ್ಟ್ರೀಯ ಸಂಘಟನಾ ಮಂತ್ರಿಗಳಾದ ಶ್ರೀ ಮಹೇಂದ್ರಕಪೂರ್ ಅವರು ಪ್ರವಾಸದ ಯೋಜನೆಯಂತೆ ಕರ್ನಾಟಕಕ್ಕೆ ಬಂದು ಪ್ರಮುಖ ಕಾರ್ಯಕರ್ತರ ಗುಂಪಿನಲ್ಲಿ ಈ ಬಾರಿ ಕರ್ನಾಟಕದಲ್ಲಿ "ರಾಷ್ಟ್ರೀಯ ಅಧಿವೇಶನ" ಮಾಡಬಹುದೇ? ಎಂದು ನಮ್ಮ ಮುಂದೆ ಪ್ರಶ್ನೆ ಇಟ್ಟಾಗ ಅನೇಕ ಆತಂಕಗಳ ಮಧ್ಯದಲ್ಲಿಯೂ ಒಪ್ಪಿಕೊಂಡೆವು. ಮಾನಸಿಕ ತಯಾರಿ ಪ್ರಾರಂಭವಾಯಿತು. ಮಾಧ್ಯಮಿಕ ಶಿಕ್ಷಕರ ಸಂಘಕ್ಕೆ ಈ ಮೊದಲು ಎರಡು ಅಧಿವೇಶನಗಳನ್ನು ಮಾಡಿರುವ ಅನುಭವವೂ ಇತ್ತು. ಆದರೆ ಈ ಬಾರಿ ಕೆಲವು ಭಿನ್ನತೆಗಳಿದ್ದವು. ಸಂಘದ ಸಂರಕ್ಷಕರಾದ ಶ್ರೀ ಕೃ. ನರಹರಿಜೀ, ಶ್ರೀ ಹೆಚ್ ನಾಗಭೂಷಣ್‌ಜಿ ಮತ್ತು ಶ್ರೀಮತಿ ಸೀತಾಲಕ್ಷ್ಮಿಜೀ, ಶ್ರೀ ಕೆ. ಬಾಲಕೃಷ್ಣಭಟ್‌ಜೀ ಅವರ ಮಾರ್ಗದರ್ಶನ ಸಹಜವಾಗಿ ನಮಗೆಲ್ಲಾ ದೊರೆಯಿತು. ದಿ. ಕೃಷ್ಣಮೂರ್ತಿಯವರ ಅನುಪಸ್ಥಿತಿ ನಮಗೆಲ್ಲಾ ಸಹಜವಾಗಿ ಕಾಡುತ್ತಿತ್ತು. ಆದರೆ ಜಿ. ಲಕ್ಷ್ಮಣ್‌ಜಿ ಎನ್ನುವ ಅನುಭವಿ ಕಾರ್ಯಕರ್ತರೊಬ್ಬರು ABRSMನ ರಾಷ್ಟ್ರೀಯ ಸಹಸಂಘಟನಾ ಮಂತ್ರಿಗಳಾಗಿ ಜವಾಬ್ದಾರಿ ಹೊತ್ತು ಬೆಂಗಳೂರು ಕೇಂದ್ರಸ್ಥಾನವಾಗಿ ಬಂದಿರುವುದು ಕಾರ್ಯಕರ್ತರ ಪಾಲಿನ ಸೌಭಾಗ್ಯವಾಗಿತ್ತು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಜವಾಬ್ದಾರಿ ಇರುವ ಶ್ರೀ ಶಿವಾನಂದ ಸಿಂಧನಕೇರಾ ಅವರು ಕರ್ನಾಟಕದವರೇ ಆಗಿರುವುದರಿಂದ ಸಹಜವಾಗಿಯೇ ನಮಗೆಲ್ಲಾ ಅವರ ಮಾರ್ಗದರ್ಶನ ದೊರೆಯಿತು.

**ಅಧಿವೇಶನದ ತಯಾರಿ ಪ್ರಾರಂಭ:** ಶ್ರೀ ರಾಮನ ಜನ್ಮಸ್ಥಳ ಅಯೋಧ್ಯೆಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ (26.06.2022) ಅಧಿಕೃತವಾಗಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಅಧಿವೇಶನ ನಡೆಯಲಿದೆ ಎಂದು ಘೋಷಣೆಯಾದಾಗ ತಯಾರಿಯ ತೀವ್ರತೆ ಹೆಚ್ಚಿತು.

ಈ ಮಧ್ಯದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ನಿಮಿತ್ತ ಭಾರತಮಾತಾ ಪೂಜನ ಕಾರ್ಯಕ್ರಮವಿತ್ತು. ಸ್ವಾತಂತ್ರ್ಯ ಯೋಧರಿಗೆ ಸನ್ಮಾನ ಕಾರ್ಯಕ್ರಮ ಯೋಜನೆ ರಾಜ್ಯದಲ್ಲಿ ನಡೆದಿತ್ತು. 01.08.2022 ರಾಜ್ಯದಲ್ಲಿ 1675 ಶಾಲೆಗಳಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಯಿತು. ಹಾಗೆಯೇ 7, 8 ಸೆಪ್ಟೆಂಬರ್ 2022 ರಲ್ಲಿ ನಡೆದ "ಭಾರತ 75 ಉನ್ನತ ಶಿಕ್ಷಣ, ಉನ್ನತ ಭಾರತ" ಎನ್ನುವ ಕಾರ್ಯಕ್ರಮಗಳು ರಾಷ್ಟ್ರೀಯ ಅಧಿವೇಶನಕ್ಕೆ ಕಾರ್ಯಕರ್ತರನ್ನು ತಯಾರಿಸುವ ತರಬೇತಿ ಕಾರ್ಯಕ್ರಮದಂತೆ ಇದ್ದವು.

**ಸ್ಥಳ ನಿರ್ಧಾರ :** ರಾಷ್ಟ್ರೀಯ ಅಧಿವೇಶನಕ್ಕಾಗಿ ಅನೇಕ ಸ್ಥಳಗಳನ್ನು ಯೋಚಿಸಲಾಯಿತು. ಆದರೆ ಎಲ್ಲರ ನಿರ್ಧಾರದಂತೆ ಜನಸೇವಾ ವಿದ್ಯಾಕೇಂದ್ರ, ಚೆನ್ನೇನಹಳ್ಳಿ, ಬೆಂಗಳೂರು ಇಲ್ಲಿ ಅಂತಿಮವಾಗಿ ಯೋಚಿಸಿ ನಿರ್ಧಾರ ಮಾಡಲಾಯಿತು. 15.04.2022ರಂದು ಪೂರ್ವ ಭಾವಿಯಾಗಿ ಜನಸೇವಾದಲ್ಲಿ ಬೈಠಕ್ ಆಯೋಜಿಸಿ ಸ್ಥಳ ಪರಿಚಯ ಮಾಡಿಕೊಳ್ಳಲಾಯಿತು. ಅಂದು ಉಪಸ್ಥಿತರಿದ್ದ ಕೃ. ನರಹರಿಜೀಯವರು ನಮ್ಮೆಲ್ಲರ ಜೊತೆಯಲ್ಲಿ ಓಡಾಡಿ ಸ್ಥಳ ಪರಿಚಯಿಸಿದ್ದು, ಅಲ್ಲಿದ್ದ ಪ್ರಮುಖ ಕಾರ್ಯಕರ್ತರೆಲ್ಲರಿಗೂ ಪ್ರೇರಣಾದಾಯಕವಾಗಿತ್ತು.

**ಸ್ವಾಗತ ಸಮಿತಿ ರಚನೆ:** ಸಂಘಟನೆಯ ಕೋರ್ ಟೀಂ ಸ್ವಾಗತ ಸಮಿತಿಗಾಗಿ ಅನೇಕ ಹೆಸರುಗಳನ್ನು ಪಟ್ಟಿ ಮಾಡಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಶ್ರೀ ತಿಪ್ಪೇಸ್ವಾಮಿಜೀಯವರ ಮಾರ್ಗದರ್ಶನ ದೊರೆಯಿತು. ಎಲ್ಲರ ಒಟ್ಟು ಅಭಿಪ್ರಾಯದಂತೆ ನಿವೃತ್ತ ಐ.ಪಿ.ಎಸ್ ಅಧಿಕಾರಿ, ಮಾಜಿ ರಾಜ್ಯಸಭೆಯ ಸದಸ್ಯರು ಮತ್ತು CMR ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಕೆ.ಸಿ. ರಾಮಮೂರ್ತಿಯವರನ್ನು ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ರಾಮಮೂರ್ತಿಯವರು ಕಾರ್ಯಕರ್ತರ ಜೊತೆಯಲ್ಲಿ ಇದ್ದು, ಕಾರ್ಯಕ್ರಮದ ಪ್ರತಿ ಅಂಶವನ್ನು ಬರೆದುಕೊಟ್ಟಿದ್ದರು. ಕೆಲಸಗಳನ್ನು ಗಮನಿಸುವುದಕ್ಕಾಗಿ ತಮ್ಮ ಸಮಯವನ್ನು ಮೀಸಲಿಟ್ಟರು. ಕಾರ್ಯಕರ್ತರ ಜೊತೆಯಲ್ಲಿ ತಾವು ಕಾರ್ಯಕರ್ತರಾಗಿ ಬೆರೆತು ಕೆಲಸಮಾಡಿದ್ದು, ನಮಗೆಲ್ಲಾ ಪ್ರೇರಣಾದಾಯಕವಾಗಿತ್ತು. ಈ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿ ಶ್ರೀ ಅರುಣ್ ಶಹಾಪೂರ್, ಖಜಾಂಚಿಯಾಗಿ ಶ್ರೀ ಪುಟ್ಟರಾಜು, ಸಹ ಖಜಾಂಚಿಗಳಾಗಿ ಶ್ರೀ ಜೆ.ಎಂ. ಜೋಷಿ ಸಂಯೋಜಕರಾಗಿ, ಶ್ರೀ ರಘು ಅಕಮಂಚಿ, ಸಹ ಸಂಯೋಜಕರಾಗಿ ಶ್ರೀ ಚಿದಾನಂದ ಪಾಟೀಲ್ ಮತ್ತು ಉಳಿದಂತೆ ಒಟ್ಟು 65 ಗಣ್ಯಮಾನ್ಯರಿಂದ ಕೂಡಿದ ಸ್ವಾಗತ ಸಮಿತಿ ಹಗಲಿರುಳೆನ್ನದೆ ಕಾರ್ಯ ಮಾಡಿತು.

**ಅಧಿವೇಶನದ ತಯಾರಿ :** ಅಧಿವೇಶನದ ಯಶಸ್ವಿಗಾಗಿ ಒಟ್ಟು 12 ಕ್ಲಸ್ಟರ್ ವಿಭಾಗಗಳನ್ನು ಮಾಡಲಾಗಿತ್ತು. ಪ್ರಬಂಧಕ ಕ್ಲಸ್ಟರ್ ಜವಾಬ್ದಾರಿ ಶ್ರೀ ಚಿದಾನಂದ್ ಪಾಟೀಲ್ ಅವರಿಗೆ ವಹಿಸಲಾಗಿತ್ತು.

ಪುಟ 4 ಕ್ಕೆ ➢



ಅಧಿವೇಶನದ ಪೂರ್ವ ತಯಾರಿ ಚಿತ್ರಗಳು



➤ ಪುಟ 3 ರಿಂದ.....

ಅದರಲ್ಲಿ ನಾಲ್ಕು ಉಪವಿಭಾಗಗಳಿದ್ದವು. ಗುರುಕುಲಕರ್ಣಿ, ಅನಿಲಬಿರಾದಾರ್, ಶಿರಿಷ್ ಕುಲಕರ್ಣಿ, ಆರ್. ಜಿ. ಸನ್ನಿ, ಚಂದ್ರಶೇಖರ ಪಾಟೀಲ್ ಮತ್ತು ನವೀನಾ ಶೆಟ್ಟಿಗಾರ್ ಅವರ ಜೊತೆಯಲ್ಲಿ ಅನೇಕ ಕಾರ್ಯಕರ್ತರ ತಂಡ ಈ ಕಾರ್ಯದಲ್ಲಿತ್ತು. ನಿರ್ಮಾಣದ ಕ್ಲಸ್ಟರ್ ಜವಾಬ್ದಾರಿ ಎ. ಗಂಗಾಧರ ಆಚಾರಿಯವರಿಗೆ ಆರು ವಿಭಾಗಗಳೊಂದಿಗೆ ವೃಷಭೇಂದ್ರಸ್ವಾಮಿ, ಅವಟಿ ಸರ್, ಅಪ್ಪಾಸಾಹೇಬ್ ಗಾಣಿಗೇರ, ವಿನ್ಯಾಸಕಾರರಾದ ಅನಿಲ್‌ಕುಮಾರ್ ಮತ್ತು ಶ್ರೀಮತಿ ಜಾನ್ಸಿಯವರ ಜೊತೆ ಸೇರಿ ಜನಸೇವಾ ವಿದ್ಯಾಸಂಸ್ಥೆಯ ಸಹಕಾರದೊಂದಿಗೆ ನೀಡಲಾಗಿತ್ತು. ಸಚಿವಾಲಯದ ಕ್ಲಸ್ಟರ್ ಜವಾಬ್ದಾರಿಯನ್ನು ಶ್ರೀಮತಿ ಮಮತಾ ಡಿ.ಕೆ ಅವರಿಗೆ ಹತ್ತು ವಿಭಾಗಗಳೊಂದಿಗೆ ವರಲಕ್ಷ್ಮಿ, ಮನೋರಮ, ಚಂದ್ರಮೌಳಿ, ವಿ. ಡಿ. ಭಟ್, ಸುಷ್ಮಾ, ರೀತು, ಅವಿನಾಶ ಹಿರೇಮಠ, ವಿಜಯಲಕ್ಷ್ಮಿ ಬಿ, ಡಾ॥ ವರದರಾಜು, ಉಷಾ, ಡಾ॥ ಪ್ರದೀಪ್ ಅವರನ್ನು ಒಳಗೊಂಡ ತಂಡ ಕಾರ್ಯ ಮಾಡಿತು. **ನೊಂದಣಿ ವಿಭಾಗ** ಡಾ॥ ಸಂಗಪ್ಪ ಸರ್ ಅವರ ನೇತೃತ್ವದಲ್ಲಿ ನಾಲ್ಕು ಉಪ ವಿಭಾಗಗಳೊಂದಿಗೆ ಡಾ॥ ನಂದಿನಿ, ಜಿ. ನಂಜುಂಡಸ್ವಾಮಿ, ಪ್ರೊ॥ ಶಶಿಕುಮಾರ, ಯೋಗಾನಂದ ಮತ್ತು ದಿಲಿಪ್‌ನ ಅವರ ಸಹಕಾರದೊಂದಿಗೆ ನಿರ್ವಹಿಸಿತು. ಕಾರ್ಯಕ್ರಮ ಸಂಯೋಜನೆಯನ್ನು ಡಾ॥ ಸಂಗಮೇಶ್ ಅವರ ನೇತೃತ್ವದಲ್ಲಿ ಹತ್ತು ಉಪಸಮಿತಿಗಳಲ್ಲಿ ಪ್ರೊ॥ ಕವಿತಾ, ಶ್ರೀಮತಿ ವಿಮಲಾ, ಮರಿದೇವರ ಮಠ, ಅನುಶ್ರೀ, ವನಜಾ, ಜ್ಯೋತಿಲಕ್ಷ್ಮಿ, ಮಂಜುನಾಥ, ಡಾ॥ ಹರೀಶ್‌ಬಾಬು, ಮಹೇಶ್ ಬಸರಕೋಡ್, ಪ್ರೊ॥ ವಿಶ್ವನಾಥ್, ಬಸವರಾಜು ಪಟ್ನಿ ಇವರ ಸಹಯೋಗದೊಂದಿಗೆ ಕಾರ್ಯ ಮಾಡಿತು. **ಸಾರಿಗೆ:** ಸಾರಿಗೆಯು ಬೆಂಗಳೂರಿನಿಂದ 30 ಕಿ.ಮೀ ಅಂತರದಲ್ಲಿಯವರ ಸಮ್ಮೇಳನ ಸ್ಥಳಕ್ಕೆ ಪ್ರತಿನಿಧಿ ಮತ್ತು ಅತಿಥಿಗಳನ್ನು ಬರಮಾಡಿಕೊಳ್ಳುವುದು ಮತ್ತು ಕಳುಹಿಸುವ ಕಾರ್ಯ ಜೆ.ಎಮ್. ಜೋಷಿ ಇವರ ನೇತೃತ್ವದ ಸಮಿತಿಯಲ್ಲಿ ಮಲ್ಲಿಕಾರ್ಜುನ ಕೂಡಗಿ, ಗಂಗಪ್ಪ, ರಾಮಕೃಷ್ಣ, ಹರಿದಾಸ್, ಕಿರಣ್ ಕುಮಾರ್, ಗಂಗಾಧರ ಎಂ.ವಿ ಮತ್ತು ಎ.ಸಿ ಪ್ರದೀಪ್ ಅವರನ್ನು ಒಳಗೊಂಡ ತಂಡ ಕಾರ್ಯದಲ್ಲಿತ್ತು. **ವಸತಿ ವಿಭಾಗ:** ಅಭಿಷೇಕ್ ಕುಬಸದ್ ಅವರ ನೇತೃತ್ವದಲ್ಲಿ ಶ್ರೀಮತಿ ರೋಹಿಣಿನಾಯ್ಕ, ಧನಲಕ್ಷ್ಮಿ, ಸುರೇಶ್, ವೆಂಕಟೇಶ, ನಾಗಿರೆಡ್ಡಿ, ಗುರುಕುಲಕರ್ಣಿ ಇವರ ತಂಡ ಈ ಕಾರ್ಯದಲ್ಲಿ ತೊಡಗಿತ್ತು. **ಆಹಾರ ವಿಭಾಗ**ದಲ್ಲಿ ಗುಂಡಾಚಾರ್ಯ ಮತ್ತು ಕೃಷ್ಣಮೂರ್ತಿ ಅವರ ನೇತೃತ್ವದಲ್ಲಿ ಕೊಟ್ರೇಶ್, ಮಿಥುನ್ ಮುಂತಾದವರ ತಂಡವಿತ್ತು. ಬಹುತೇಕ ರಾಜ್ಯದ ಎಲ್ಲ ಜಿಲ್ಲೆಗಳ ಪ್ರಬಂಧಕರು ಊಟ ಬಡಿಸುವ ಕಾರ್ಯದಲ್ಲಿ ನಿರತರಾಗಿದ್ದರು. ಹಣಕಾಸು ಸಂಗ್ರಹಕ್ಕಾಗಿ ಸುರೇಂದ್ರ ಇವರ ನೇತೃತ್ವದಲ್ಲಿ ಸಂದೀಪ ಬೂದಿಹಾಳ, ಅರುಣ್ ಶಹಾಪೂರ್ ತಂಡ ಮಾನ್ಯ ಲಕ್ಷ್ಮಣ್‌ಜೀ ಯವರ ಮಾರ್ಗದರ್ಶನದಲ್ಲಿ ಕಾರ್ಯಪ್ರವೃತ್ತರಾದರು. ಮುದ್ರಣ ವಿಭಾಗದ ಕಾರ್ಯ ರಘು ಅಕಮಂಚಿಯವರ ಆರು ಉಪವಿಭಾಗಗಳು ಡಾ॥ ಶಶಿ ಅವರನ್ನು ಒಳಗೊಂಡ ತಂಡ ಮಾಡಿತು. **ಮಾಧ್ಯಮ ವಿಭಾಗ:** ಈ ವಿಭಾಗವು ಪ್ರೊ॥ ನರಸಿಂಹಮೂರ್ತಿ ಎನ್ ಇವರ ನೇತೃತ್ವದ ತಂಡ ಈ ಕಾರ್ಯದಲ್ಲಿ ತೊಡಗಿತ್ತು. ಅತಿಥಿಗಳ ವಿಭಾಗದಲ್ಲಿ ಸಂದೀಪ ಬೂದಿಹಾಳ ಇವರ ಜೊತೆಯಲ್ಲಿ ನಂದೀಶ್, ಅರುಣ್ ಶಹಾಪೂರ್, ರಘು ಅಕಮಂಚಿ, ಜಿ.ಸಿ. ರಾಜಣ್ಣ, ಶ್ರೀಧರ್ ಕುಲಕರ್ಣಿ ಇವರ ತಂಡ ಕಾರ್ಯ ಮಾಡಿತು. ಈ ಹನ್ನೆರೆಡು ಪ್ರಮುಖ ವಿಭಾಗಗಳಲ್ಲಿ ಕೆಲವರ ಹೆಸರುಗಳು ಮಾತ್ರ ಇಲ್ಲಿ ಸ್ಮರಿಸಲು ಸಾಧ್ಯವಾಗಿದೆ. ಇದಲ್ಲದೆ 500 ಕ್ಕೂ ಹೆಚ್ಚು ಪ್ರಬಂಧಕರು ಸಮ್ಮೇಳನದ ಯಶಸ್ಸಿಗಾಗಿ ಶ್ರಮಿಸಿದ್ದಾರೆ. ಅವರೆಲ್ಲರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಗೌರವಯುತವಾಗಿ ಸ್ಮರಿಸಿಕೊಳ್ಳುತ್ತದೆ.

**ನಿರ್ಮಾಣದ ಕಾರ್ಯ ಆರಂಭ :** ನವೆಂಬರ್ ಎರಡರಂದು ಬೆಳಗಿನ ಶುಭ ಮಹೂರ್ತದಲ್ಲಿ ಜನಸೇವಾ ವಿದ್ಯಾಕೇಂದ್ರದಲ್ಲಿರುವ ತಾಯಿ ಚೌಡೇಶ್ವರಿಯನ್ನು ಪೂಜೆ ಮಾಡುವ ಮೂಲಕ ಪ್ರಾರಂಭಿಸಿದಾಗ ಅದೊಂದು ರೋಮಾಂಚನ ಅನುಭವ. ಸಂಗ್ರಹವು ಮೂರು ಭಾಗಗಳಿಂದ ಕೂಡಿತ್ತು. 1. ಕೂಪನ್ ಸಂಗ್ರಹ 2. ಧಾನ್ಯಗಳ ಸಂಗ್ರಹ 3. ದಾನಿಗಳಿಂದ ಹಣ ಸಂಗ್ರಹ. 2000 ರೂ. ಕೂಪನ್ ಸಂಗ್ರಹವು ಕಾರ್ಯಕರ್ತರಿಗೆ ಒಂದು ವಿಶಿಷ್ಟ ಅನುಭವ ನೀಡಿತು. ದೊಡ್ಡಮಟ್ಟದ ಹಣ ಸಂಗ್ರಹ ಒಂದು ಭಾಗವಾದರೆ ವಸ್ತುಗಳ ಸಂಗ್ರಹವು ರಾಜ್ಯದಲ್ಲಿಯ ಅನೇಕ ಜಿಲ್ಲೆಗಳ ಕಾರ್ಯಕರ್ತರಿಗೆ ಸಂಗ್ರಹದ ತರಬೇತಿ ನೀಡಿದಂತೆ ಇತ್ತು. ವ್ಯಕ್ತಿಗಳನ್ನು ಅವರವರ ಅಭಿರುಚಿ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ಜೋಡಿಸುವುದು ಮತ್ತು ಅವರೆಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗುವುದು ಮರೆಯಾಗಲಾಗದ ಅನುಭವ. ಸಮ್ಮೇಳನ ಕೆಲವೇ ದಿನಗಳಿರುವಾಗ ಸಮ್ಮೇಳನದ ಕಾರ್ಯಾಲಯ ಉದ್ಘಾಟನೆಯಾಯಿತು. ಈ ಕಾರ್ಯಾಲಯ ಸರಣಿ ಬೈಠಕ್‌ಗಳಿಗೆ ಸಾಕ್ಷಿಯಾಯಿತು. ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ ಸಿಂಘಾಲರು ಈ ಕಾರ್ಯಾಲಯದಲ್ಲಿ ತೆಗೆದುಕೊಂಡ ಬೈಠಕ್ ನಮ್ಮೆಲ್ಲರ ಕಾರ್ಯದ ವೇಗವನ್ನು ಹೆಚ್ಚಿಸಿತು. ಸಮ್ಮೇಳನ ಹತ್ತಿರಕ್ಕೆ ಬಂದ ಹಾಗೆ ಒಂದು ತರಹದ ಉದ್ವೇಗದ ಮಧ್ಯದಲ್ಲಿ ಸಂತೋಷದ ಅನುಭವವು ನಮಗಾಗುತ್ತಿತ್ತು.

## ಸಮ್ಮೇಳನದ ಆ ದಿನಗಳಲ್ಲಿಯ ರೋಮಾಂಚನ ಅನುಭವಗಳು:

ತಣ್ಣನೆಯ ಗಾಳಿ, ಜಿಡಿ ಮಳೆ ರಾತ್ರಿ 2.30 ನಿಮಿಷ ಪ್ರತಿನಿಧಿಯೊಬ್ಬರು ಅನಾರೋಗ್ಯಕ್ಕೆ ತುತ್ತಾದರು. 108 ಅಂಬ್ಯುಲೆನ್ಸ್‌ಗೆ ಫೋನ್ ಮಾಡಿ ಅವರನ್ನು ಕರೆದುಕೊಂಡು ಹೋಗಿ ಆಸ್ಪತ್ರೆಗೆ ಸೇರಿಸಿದ್ದು, ಆನಂತರದಲ್ಲಿ ಅವರು ಚೇತರಿಸಿಕೊಂಡಾಗ ನಮಗಾದ ಸಂತೋಷ ಅವಿಸ್ಮರಣೀಯ.

ಬೆಳಗಿನ ನಾಲ್ಕು ಗಂಟೆಯ ಸಮಯ ಬೇರೆ ರಾಜ್ಯಗಳಿಂದ ಬಂದ ಪ್ರತಿನಿಧಿಗಳಿಗೆ ಊಟಕ್ಕೆ ವ್ಯವಸ್ಥೆ ಮಾಡಿದ್ದು, ಹಸಿದ ಅವರ ಮನಸ್ಸುಗಳು ಊಟದ ನಂತರ ಅವರು ಹೇಳಿದ ಮಾತುಗಳು ವ್ಯವಸ್ಥೆ ಯಲ್ಲಿದ್ದವರಿಗೆಲ್ಲರಿಗೂ ಅನ್ವಯವಾಗುವಂತಹವುಗಳು.

ಎರಡು ರಾತ್ರಿ ನಿದ್ದೆ ಇಲ್ಲದೆ ಕಳೆದ ಯಾತಾಯಾತಾ ತಂಡ ಅತಿಯಾದ ಶೀತಗಾಳಿ, ಸಣ್ಣನೆ ಮಳೆ ಆ ಮಧ್ಯದಲ್ಲಿಯೂ ರಾತ್ರಿ 3 ಗಂಟೆಯಲ್ಲಿಯೂ ನಗುಮೊಗದಿಂದ ಪ್ರತಿನಿಧಿಗಳನ್ನು ಸ್ವಾಗತಿಸಿದ್ದು ಸ್ಮರಣೀಯ ಅನುಭವ.

ಭೂಲೋಕದಲ್ಲಿ ಸ್ವರ್ಗವನ್ನೇ ನಿರ್ಮಿಸಿದ್ದಾರೆ ಎನ್ನುವಂತಿತ್ತು ಪ್ರದರ್ಶಿನಿಯ ವ್ಯವಸ್ಥೆ. ರಾತ್ರಿಯ ವಿದ್ಯುತ್ ಬೆಳಕಿನಲ್ಲಿ ಅಲ್ಲಿರುವ ಪ್ರದರ್ಶಿನಿಗಳು ತಮ್ಮದೇ ಆದ ಕಥೆಗಳನ್ನು ಕೈ ಬೀಸಿ ಕರೆದು ಹೇಳುತ್ತಿದ್ದವು.

ವಸತಿ ವ್ಯವಸ್ಥೆಗಾಗಿ ಬೆಡ್‌ಷಿಟ್‌ಗಳು ಮತ್ತು ಹಾಸಿಗೆಗಳನ್ನು ಹೊತ್ತು

ಪುಟ 10 ಕ್ಕೆ ➤

# ಗೀತಾ ಜಯಂತಿ

ಶ್ವೇತಾದಿ
ನಿವೃತ್ತ ಮುಖ್ಯ ಶಿಕ್ಷಕರು

**ಸರ್ವವೇದಮಯೀ ಗೀತಾ ಸರ್ವಧರ್ಮ ಮಯೋ ಮನುಃ ।
ಸರ್ವತೀರ್ಥಮಯಿ ಗಂಗಾ ಸರ್ವದೇವ ಮಯೋ ಹರಿಃ ॥
ಪಾದಾಸ್ಯಾಪ್ಯರ್ಧ ಪಾದಂ ವಾ ಶ್ಲೋಕಂ ಶ್ಲೋಕಾರ್ಧಮೇವ ವಾ।
ನತ್ಯಾಂ ಧಾರಯತೇ ಯಸ್ತು ಸ ಮೋಕ್ಷಮಧಿಗಚ್ಛತಿ ॥**

ಈ ಎಲ್ಲವೂ ಗೀತೆಯ ಮಹತ್ತ್ವವನ್ನು ತಿಳಿಸುತ್ತವೆ. ಗೀತೆಯು ಶಕ್ತಿಯ, ಜ್ಞಾನದ ಮೂಲ. ಆರು ಸಾವಿರ ವರ್ಷಗಳ ಹಿಂದೆ ದ್ವಾಪರಯುಗದಲ್ಲಿ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ ಈ ಜ್ಞಾನಭಂಡಾರ ಜೀವನದ ಸಂದೇಶ– ವೇದಾಂತದ, ಜ್ಞಾನದ ಉದಾತ್ತ ತತ್ವಗಳನ್ನು ಇದು ತಿಳಿಸುತ್ತದೆ. ಇಡೀ ಮಾನವಕೋಟಿಗೆ ಸಂಬಂಧಿಸಿದಂತೆ ದೇಶ, ವರ್ಗ, ಕಾಲಾತೀತ ವಿಚಾರಗಳ ಆಕರ. ಇದು ವಿಶ್ವವ್ಯಾಪಿಯಾದ ಸತ್ಯವನ್ನು ಒಳಗೊಂಡದ್ದು.



ಮಾರ್ಗಶಿರಮಾಸದ ಶುಕ್ಲಪಕ್ಷದ ಹನ್ನೊಂದನೆಯ ದಿನವೇ ಶ್ರೀಕೃಷ್ಣನು ಗೀತೆಯನ್ನು ಅರ್ಜುನನಿಗೆ ಬೋಧಿಸಿದ ದಿನವೆಂದು 'ಗೀತಾ ಜಯಂತಿ' ಯನ್ನು ಆಚರಿಸ ಲಾಗುತ್ತದೆ. ಸನಾತನ ಧರ್ಮವನ್ನು ಪಾಲಿಸುವ ಸಾವಿರಾರು ಭಕ್ತಾದಿಗಳಿಂದ ಪ್ರಪಂಚದಾದ್ಯಂತ ಇದರ ಆಚರಣೆ ನಡೆಯುತ್ತದೆ. ಇಡೀ ದಿನ ಗೀತಾಪಠಣ ಉಪವಾಸ, ಭಜನೆ ಇತ್ಯಾದಿ ನಡೆಯುತ್ತದೆ. ಗೀತೆಯ ಪುಸ್ತಕಗಳ ಉಚಿತ ವಿತರಣೆಯೂ ಇರುತ್ತದೆ. ಗೀತಾಜಯಂತಿಯ ದಿನ ಮೋಕ್ಷದ ಏಕಾದಶಿಯೂ ಇರುವುದರಿಂದ ಅನೇಕ ಭಕ್ತರು ಅಂದು ಉಪವಾಸವ್ರತವನ್ನು ಕೈಗೊಳ್ಳುತ್ತಾರೆ.

ಗೀತೆಯ ಮಹತ್ತ್ವವಿರುವುದು ಅದು ಪ್ರತಿಯೊಬ್ಬರನ್ನೂ ಚಿಂತನೆಯ ದಾರಿಗೆ ಹಚ್ಚುವುದರಲ್ಲಿ. ಬದುಕಿನ ನಾನಾ ಘಟ್ಟಗಳಲ್ಲಿ ಸೂಕ್ತ ನಿರ್ಧಾರಗಳನ್ನು ಮಾಡುವುದರಲ್ಲಿ. ಜೀವನವನ್ನು ಹೊಸದೃಷ್ಟಿಯಿಂದ ನೋಡುವಂತೆ ಮಾರ್ಗದರ್ಶನ ನೀಡುವುದರಲ್ಲಿ, ಸ್ವಂತಿಕೆಯನ್ನು ಕಾಪಾಡಿಕೊಳ್ಳುವುದರಲ್ಲಿ, ಒಟ್ಟಾರೆಯಾಗಿ ಗೀತೆಯು ವೈಚಾರಿಕತೆಯನ್ನು ಬೆಳೆಸಿಕೊಳ್ಳಲು ಸಹಕರಿಸುತ್ತದೆ. ಸಾವಿರಾರು ವರ್ಷಗಳ ಹಿಂದೆ ಗೀತಾಬೋಧನೆ ನಡೆಯಿತೆಂದು ತಿಳಿದಿರುವುದಾದರೂ ಅದರಲ್ಲಿ ಪ್ರಸ್ತಾಪಿಸಿರುವ ಪ್ರತಿಯೊಂದು ವಿಚಾರವೂ ಸಹ ಪ್ರಸ್ತುತಕ್ಕೆ ಅನ್ವಯ ವಾಗುವಂತೆಯೇ ಇದೆ. ಏಳುನೂರು ಶ್ಲೋಕಗಳಲ್ಲಿ ಹದಿನೆಂಟು ಅಧ್ಯಾಯಗಳಲ್ಲಿ ವಿವರಿಸಿರುವ ವಿಚಾರಗಳು ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ ಎಂದು ಮೂರು ಬಗೆಗಳಲ್ಲಿ ಬದುಕಿನ ಧ್ಯೇಯವನ್ನು ತಿಳಿಸುತ್ತವೆ. ಕರ್ತವ್ಯವನ್ನು ತಿಳಿಸುತ್ತವೆ. ಉತ್ತಮ ನಡವಳಿಕೆಯನ್ನು ಕಲಿಯುವ ಬಗೆಯನ್ನು ಕಲಿಸುತ್ತವೆ.

"ಭಗವಂತನ ಗೀತೆ' ಎಂಬ ಅರ್ಥವನ್ನು ಹೊಂದಿರುವ ಈ ಗೀತೆಯಲ್ಲಿ ಜ್ಞಾನಯೋಗವು ಜೀವನದ ಅತ್ಯುಚ್ಚ ಸ್ಥಿತಿಯೆಂದೂ ಆದರೆ ಯಾರೊಬ್ಬರೂ ನೇರವಾಗಿ ಅದನ್ನು ತಲುಪುವುದು ಸಾಧ್ಯವಿಲ್ಲವೆಂದೂ ಉಳಿದೆರಡು ಹಂತಗಳನ್ನು ದಾಟಿದ ನಂತರವೇ ಆ ಹಂತಕ್ಕೆ ಏರಲು ಸಾಧ್ಯವೆಂದೂ ಹೇಳಿದೆ. ಹಾಗಾಗಿ ಪ್ರತಿಯೊಬ್ಬ ಮನುಷ್ಯನೂ ತನ್ನ ಪಾಲಿಗೆ ಬಂದ ಕರ್ತವ್ಯಗಳನ್ನು ನಿಷ್ಠೆಯಿಂದ ಪಾಲಿಸುವುದು ಎಷ್ಟು ಮುಖ್ಯವೋ ಅಷ್ಟೇ ಶ್ರದ್ಧೆಯೊಂದಿಗೆ ಪರಮಾತ್ಮ ತತ್ತ್ವವನ್ನು ಭಕ್ತಿಯೋಗದ ಮೂಲಕ ತಿಳಿಯುವ ಕಾರ್ಯಕ್ಕೆ ತೊಡಗ ಬೇಕೆಂದೂ ಅದರ ನಂತರವೇ ಮೂರನೆಯ ಹಾಗೂ ಪ್ರಬುದ್ಧತೆಯ 'ಜ್ಞಾನಯೋಗ' ವನ್ನು ಸಾಧಿಸಲು ಸಾಧ್ಯವಾಗುತ್ತದೆಂದು ತಿಳಿಸಿದೆ.

'ಗೀತಾಜಯಂತಿ'ಯನ್ನು ಭಾರತವಲ್ಲದೆ ಹಲವು ದೇಶಗಳಲ್ಲಿಯೂ ಆಚರಿಸುತ್ತಾರೆ. ಕೃಷ್ಣಪಂಥವನ್ನು ಸ್ವಾಮಿ ಪ್ರಭುಪಾದರು ಸ್ಥಾಪಿಸಿದ ನಂತರವಂತೂ ಅವರ ಅನುಯಾಯಿಗಳು ದೇಶದ ಹಾಗೂ ಹೊರದೇಶಗಳಲ್ಲಿಯೂ ಸಾವಿರಾರು ಮಂದಿ ಇರುವುದರಿಂದ ಗೀತಾಜಯಂತಿಯು ಸಂಭ್ರಮದಿಂದ ಎಲ್ಲ ಕಡೆಗಳಲ್ಲಿ ನಡೆಯುತ್ತದೆ. ಭಗವದ್ಗೀತೆಯ ಪಾರಾಯಣ, ವಿದ್ವಾಂಸರ ಜೊತೆಯಲ್ಲಿ ಅದರಲ್ಲಿರುವ ವಿಚಾರಗಳು, ಅವುಗಳ ಪ್ರಸ್ತುತತೆ, ಬದುಕಿನಲ್ಲಿ ಅಳವಡಿಸಿ ಕೊಳ್ಳಬೇಕಾದ ಅಗತ್ಯ ಎಲ್ಲದರ ಕುರಿತು ಚರ್ಚೆ ನಡೆಯುತ್ತದೆ. ಭಕ್ತಿ ಗೀತೆಗಳ ಗಾಯನವೂ ಇರುತ್ತದೆ. ಗೀತೆಯ ಸಂದೇಶಗಳನ್ನು ಮನನ ಮಾಡಿಕೊಳ್ಳುತ್ತ, ಆತ್ಮವಿಶ್ವಾಸ, ಆತ್ಮಬಲಗಳನ್ನು ವೃದ್ಧಿಸಿ ಕೊಳ್ಳುವ ಪ್ರಯತ್ನದೊಂದಿಗೆ ಜೀವನವನ್ನು ಹಸನು ಮಾಡಿಕೊಳ್ಳಲು ಸಿದ್ಧರಾಗುತ್ತಾರೆ.

**ಗೀತಾಶಾಸ್ತ್ರಮಿದಂ ಪುಣ್ಯಂ ಯಃ ಪಠೇತ್ಪ್ರಯತಃ ಪುಮಾನ್ ।
ವಿಷ್ಣೋಃ ಪದಮವಾಪ್ನೋತಿ ಭಯಶೋಕಾದಿವರ್ಜಿತಃ ॥**

# ಶಿಕ್ಷಾಭೂಷಣ ಪ್ರಶಸ್ತಿ ವಿಜೇತರು

## ಗೌರವಾನ್ವಿತ ಭಾರತಿ ಠಾಕೂರ್ ಜೀ



ಹಿಂದಿ-ಮರಾಠಿ ಮತ್ತು ಇಂಗ್ಲಿಷ್ ಸಾಹಿತ್ಯದ ಸೃಜನಶೀಲ ಸೃಷ್ಟಿಕರ್ತೆ, ಸ್ವಾಮಿ ವಿವೇಕಾನಂದರ ಜೀವನ ತತ್ವದ ಕ್ರಿಯಾತ್ಮಕ ಅನ್ವೇಷಕಿ, ಅನೇಕ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕಿ, ನರ್ಮದಾ ನದಿ ನೀರು ಸಂರಕ್ಷಣೆ ಮತ್ತು ಸ್ವಚ್ಛತಾ ಅಭಿಯಾನದ ಪ್ರಮುಖ ನಾಯಕಿ ಮತ್ತು ಅಸ್ಸಾಂದ ದೂರದ ಬುಡಕಟ್ಟು ಪ್ರದೇಶದ ಹಿಂದುಳಿದ ಮತ್ತು ಬುಡಕಟ್ಟು ಸಮಾಜದ ಮಕ್ಕಳ ಶಿಕ್ಷಣಕ್ಕಾಗಿ ನಿರಂತರ ಹೋರಾಟ ನಡೆಸುತ್ತಿರುವ ಸುಶ್ರೀ ಭಾರತಿ ಠಾಕೂರ್ ಜೀ ಅವರಿಗೆ 'ಶಿಕ್ಷಾ-ಭೂಷಣ' ಅಖಿಲ ಭಾರತ ಶಿಕ್ಷಕ ಪ್ರಶಸ್ತಿಯನ್ನು ನೀಡುವ ಮೂಲಕ ಅಖಿಲ ಭಾರತ ರಾಷ್ಟ್ರೀಯ ಶೈಕ್ಷಣಿಕ ಮಹಾಸಂಘವು ಹೆಮ್ಮೆ ಪಡುತ್ತಿದೆ,


ಸುಶ್ರೀ ಭಾರತಿ ಜೀ ಅವರು ತಮ್ಮ ಹೆಸರನ್ನು ಅರ್ಥಪೂರ್ಣ ವಾಗಿಸಿದ್ದಾರೆ ಮತ್ತು ಅನೇಕ ಕ್ಷೇತ್ರಗಳಲ್ಲಿ ತಾಯಿ ಭಾರತಿಯ ಸೇವೆ ಮಾಡುವ ಸಂಕಲ್ಪವನ್ನು ಸಾಕಾರಗೊಳಿಸಿದ್ದಾರೆ. ನೀವು ನಿಮ್ಮ ಇಡೀ ಜೀವನವನ್ನು ರಾಷ್ಟ್ರದ ಸೇವೆ, ಮಹಿಳಾ ಶಿಕ್ಷಣ, ಮಹಿಳಾ ಸಬಲೀಕರಣ, ಬುಡಕಟ್ಟು ಪ್ರದೇಶಗಳಲ್ಲಿ ಶಿಕ್ಷಣವನ್ನು ಹರಡಲು ಮತ್ತು ಅವರ ಪ್ರಗತಿ ಮತ್ತು ಸಮೃದ್ಧಿಗಾಗಿ ಮೀಸಲಿಟ್ಟಿದ್ದೀರಿ. ನೀವು ಉದಾರ ಮಾದರಿ ಶಿಕ್ಷಕರಾಗಿದ್ದೀರಿ. ಇದರ ಫಲವಾಗಿ, ವಿವೇಕಾನಂದ ಕೇಂದ್ರಗಳಲ್ಲಿ ನಿರಂತರ ಶಿಕ್ಷಣದಂತಹ ಮಾನವ ಕಲ್ಯಾಣಕ್ಕಾಗಿ ನೀವು ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಸಂಯೋಜಿಸಿದ್ದೀರಿ. ನೀವು ಪ್ರಸ್ತುತ ನರ್ಮದಾ ಸಂಸ್ಥಾನದ ಪ್ರಧಾನ ಕಾರ್ಯದರ್ಶಿಯಾಗಿ ಗ್ರಾಮೀಣಾಭಿವೃದ್ಧಿಯಲ್ಲಿ ತೊಡಗಿಸಿಕೊಂಡಿದ್ದೀರಿ. ಅವಧಿಗೂ ಮುನ್ನವೇ ವಿದ್ಯಾಭ್ಯಾಸ ಬಿಟ್ಟ ಮಕ್ಕಳಿಗೆ ಮರು ಶಿಕ್ಷಣ ನೀಡುವ ಪುಣ್ಯ ಕಾರ್ಯವನ್ನು ಇದಕ್ಕೆ ಸಂಬಂಧಿಸಿದ 'ನರ್ಮದಾಲಯ' ಕೇಂದ್ರಗಳು ಮಾಡುತ್ತಿವೆ. ಅಂತಹ ಮಕ್ಕಳಿಗೆ ಉಚಿತ ವಸತಿ, ಆಹಾರ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗುತ್ತದೆ. ಈ ಸಂಸ್ಥೆಗಳಲ್ಲಿ, ಸಾವಿರಾರು ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನದ ಮೂಲಕ ಶಿಕ್ಷಣವನ್ನು ಪಡೆಯುತ್ತಿದ್ದಾರೆ ಮತ್ತು ನೀರು ನೈರ್ಮಲ್ಯ, ಸೌರಶಕ್ತಿ, ಮಣ್ಣು ಪರೀಕ್ಷೆ, ನೀರಾವರಿ ಮತ್ತು ಕೃಷಿ ಆಧಾರಿತ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಪಡೆಯುತ್ತಿದ್ದಾರೆ. 'ನರ್ಮದಾ ಪರಿಕ್ರಮ: ಏಕ್ ಅಂತರಯಾತ್ರೆ', 'ಪಾಊಸ್ ಮಧೆ ಪಡತಾಂನಾ', 'ಭಟಕಂತೀಚಿ ಪಾಠಶಾಲಾ' ಇತ್ಯಾದಿಗಳು ನಿಮ್ಮ ಮುಖ್ಯ ಪ್ರಕಟಿತ ಪುಸ್ತಕಗಳಾಗಿವೆ, ಅವುಗಳು ಆಡಿಯೊ ರೂಪದಲ್ಲಿಯೂ ಲಭ್ಯವಿದೆ. ಸುಶ್ರೀ ಭಾರತಿ ಜಿ ಅವರು ರಾಷ್ಟ್ರೀಯ ಪ್ರಜ್ಞೆಯ ಪತ್ರಕರ್ತರಾಗಿ, ಅನೇಕ ಪತ್ರಿಕೆಗಳಲ್ಲಿ ಸೈದ್ಧಾಂತಿಕ ಲೇಖನಗಳ ಸರಣಿಯನ್ನು ಮತ್ತು ಆಲ್ ಇಂಡಿಯಾ ರೇಡಿಯೊದಲ್ಲಿ ಸುಮಾರು ನೂರು ಪರಿಣಾಮಕಾರಿ ಭಾಷಣಗಳನ್ನು ಪ್ರಸ್ತುತಪಡಿಸಿದ್ದಾರೆ, ಇದು ಮಹಾರಾಷ್ಟ್ರದಾದ್ಯಂತ ಮೆಚ್ಚುಗೆ ಪಡೆದಿದೆ.

ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನ ಸೃಜನಾತ್ಮಕ ಬರವಣಿಗೆ ಸಮ್ಮಾನ್, ಮಾ ಅಹಲ್ಯಾ ಸಮ್ಮಾನ್, ಸೇವಾ ಪಥಿಕ್ ಸಮ್ಮಾನ್, ಲೋಕಸತ್ತಾ ನವದುರ್ಗಾ ಸಮ್ಮಾನ್, ಗುರೂಜಿ ರಾಷ್ಟ್ರೀಯ ಸಮ್ಮಾನ್, ಮಾತೃ ಮಂದಿರ ವಿಶ್ವಸ್ತ ಸಂಸ್ಥೆ ಸಮ್ಮಾನ್ ಮತ್ತು ನಾನಾಜಿ ದೇಶಮುಖ್ ಸಮ್ಮಾನ್ ಮುಂತಾದ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

ಭಾರತೀಯ ಜೀವನ ದೃಷ್ಟಿಯ ಮೂಲ ಚಿಂತನೆ ಮತ್ತು ಮಕ್ಕಳು ಮತ್ತು ಮಹಿಳೆಯರ ಕಡೆಗೆ ಸಬಲೀಕರಣದ ಅನನ್ಯ ಪ್ರಜ್ಞೆಯು ನಿಮ್ಮನ್ನು ಶಿಕ್ಷಣ ಜಗತ್ತಿನಲ್ಲಿ ಅನನ್ಯವಾಗಿಸುತ್ತದೆ. ಅಖಿಲ ಭಾರತ ರಾಷ್ಟ್ರೀಯ ಶೈಕ್ಷಣಿಕ ಮಹಾಸಂಘವು ನಿಮ್ಮ ಸಾಧನೆಯನ್ನು ಅಭಿನಂದಿಸುತ್ತದೆ ಮತ್ತು ನಿಮ್ಮ ದೀರ್ಘ ಮತ್ತು ಆರೋಗ್ಯಕರ ಜೀವನಕ್ಕಾಗಿ ದೇವರನ್ನು ಪ್ರಾರ್ಥಿಸುತ್ತದೆ.

## ಗೌರವಾನ್ವಿತ ಡಾ॥ ಚಾಂದ್ ಕಿರಣ ಸಲೂಜಾ

ಸಂಸ್ಕೃತ, ಹಿಂದಿ, ಭಾಷಾಶಾಸ್ತ್ರ, ಶಿಕ್ಷಣ, ರಾಜ್ಯಶಾಸ್ತ್ರ ಇತ್ಯಾದಿಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ತಮ್ಮ ಬರವಣಿಗೆ, ಶಿಕ್ಷಣ ಮಾರ್ಗದರ್ಶನ ಮತ್ತು ರಚನೆಗೆ ಕೊಡುಗೆ ನೀಡಿದ ಶಿಕ್ಷಣ ಜಗತ್ತಿನಲ್ಲಿ ಸಮರ್ಪಿತ ವ್ಯಕ್ತಿತ್ವ. ಮುನ್ನೂರಕ್ಕೂ ಹೆಚ್ಚು ಪಠ್ಯಪುಸ್ತಕಗಳು.ಶಿಕ್ಷಣ ತತ್ವಶಾಸ್ತ್ರ, ಶಿಕ್ಷಣ ಸಮಾಜಶಾಸ್ತ್ರ, ಶಿಕ್ಷಣ ಮನೋವಿಜ್ಞಾನದಂತಹ ವಿಷಯಗಳ ಮೇಲೆ ಹಲವು ವರ್ಷಗಳಿಂದ ಪರಿಣಾಮಕಾರಿ ಬೋಧನಾ ಕಾರ್ಯವನ್ನು ಮಾಡಿದ್ದಾರೆ. ಆಯುರ್ವೇದ, ಯೋಗ, ಭಗವದ್ಗೀತೆ, ವೇದಾಂತ, ಜ್ಯೋತಿಷ್ಯ, ನಾಟ್ಯಶಾಸ್ತ್ರ, ಮಹಾಭಾರತ, ರಾಮಾಯಣ, ರಘುವಂಶ ಮುಂತಾದ ಭಾರತೀಯ ಮಹಾನ್ ಪುರಾಣಗಳ ವಿಷಯಗಳ ಮೇಲೆ ವಿಸ್ತಾರವಾದ ಪುಸ್ತಕ ರಚಿಸಿ, ಶಿಕ್ಷಣ ಜಗತ್ತನ್ನು ಶ್ರೀಮಂತಗೊಳಿಸಿದ ಡಾ॥ ಚಾಂದ್ ಕಿರಣ ಸಲೂಜಾ ಅವರಿಗೆ 'ಶಿಕ್ಷಾಭೂಷಣ' ಅಖಿಲ ಭಾರತ ಪ್ರಶಸ್ತಿ ನೀಡಿ ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಹೆಮ್ಮೆ ಪಡುತ್ತಿದೆ.



ಶ್ರೀ ಡಾ॥ ಚಾಂದ್ ಕಿರಣ ಸಲೂಜಾ ಅವರು ವಿಜ್ಞಾನ ವಿಷಯದ ಅಧ್ಯಯನದ ನಂತರ ಐದು ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ ಮತ್ತು ಬಿ.ಎಡ್, ಎಮ್ ಎಡ್, ಎಲ್.ಎಲ್.ಬಿ, ಎಂ.ಫಿಲ್., ಪಿಎಚ್.ಡಿ. ಅವರ ನಿರಂತರ ಅಧ್ಯಯನ ಮತ್ತು ಕಠಿಣ ಪರಿಶ್ರಮದ ಫಲವಾಗಿ ಅವರಿಗೆ ದೊರೆತಿವೆ. ನಂತರ ನಿರಂತರ ಸಂಶೋಧನೆ ಮತ್ತು ಪ್ರಕಟಣೆಯ ಅತ್ಯುತ್ತಮ ಸಾಧನೆಗಳ ಆಧಾರದ ಮೇಲೆ ನಿಮಗೆ ಡಿ.ಲಿಟ್ ಪದವಿಯನ್ನು ನೀಡಲಾಗಿದೆ.

ಬೋಧನಾ ಕಾರ್ಯದ ಜೊತೆಗೆ ಶಿಕ್ಷಕರ ತರಬೇತಿ ಕ್ಷೇತ್ರದಲ್ಲಿ ವಿಶೇಷ ಖ್ಯಾತಿಯನ್ನು ಹೊಂದಿದ್ದೀರಿ. ಬೋಧನೆ, ಸಂಶೋಧನೆ, ಸಂಶೋಧನಾ ಮಾರ್ಗದರ್ಶನ ಮತ್ತು ಶೈಕ್ಷಣಿಕ ಮಾರ್ಗದರ್ಶನ ಕ್ಷೇತ್ರದಲ್ಲಿ ನೀವು ಮಾಡಿದ ಕಾರ್ಯವು ಶಿಕ್ಷಣ ಜಗತ್ತಿನಲ್ಲಿ ಅವಿಸ್ಮರಣೀಯವಾಗಿದೆ. ನಿಮ್ಮ ಕೆಲಸದಲ್ಲಿ ನೀವು ಯಾವಾಗಲೂ

ಪುಟ 7 ಕ್ಕೆ ➤

➢ ಪುಟ 6 ರಿಂದ.....

ಭಾರತೀಯ ಶಿಕ್ಷಣ ನೆಲೆಗಳು, ಭಾರತೀಯ ಶಿಕ್ಷಣ ವಿಧಾನ ಮತ್ತು ಭಾರತೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದೀರಿ.

ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ ಹೊರತಾಗಿ, ಅವರು ಶೈಕ್ಷಣಿಕ ಪರಿಷತ್ತು, ಪಠ್ಯಕ್ರಮ ಸಮಿತಿಗಳು ಮತ್ತು ವಿವಿಧ ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳ ಪರೀಕ್ಷಾ ಸಮಿತಿಗಳ ಸದಸ್ಯರಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸುಮಾರು 13 ವರ್ಷಗಳಿಂದ ಸಂಸ್ಕೃತದ ಪ್ರಚಾರದಲ್ಲಿ ತೊಡಗಿಸಿಕೊಂಡಿರುವ ಸಂಸ್ಕೃತ ಭಾರತಿ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾಗಿದ್ದೀರಿ. ಪ್ರಸ್ತುತ ಅವರು ಸಂಸ್ಕೃತ ಪ್ರಮೋಷನ್ ಫೌಂಡೇಶನ್‌ನಲ್ಲಿ ಶೈಕ್ಷಣಿಕ ನಿರ್ದೇಶಕರ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಕೃತಿ ಉತ್ಥಾನ್‌ನಿಂದ 'ಪಂಡಿತ್ ಮದನ್ ಮೋಹನ್ ಮಾಳವೀಯ ಶಿಕ್ಷಾ ಸಮ್ಮಾನ್' ಜೊತೆಗೆ ಸಂಸ್ಕೃತ ಕೆಲಸಕ್ಕಾಗಿ ರಾಷ್ಟ್ರಪತಿಗಳಿಂದ ನಿಮಗೆ ಪ್ರಶಸ್ತಿ ನೀಡಲಾಗಿದೆ ಮತ್ತು 2020 ರಲ್ಲಿ ಉತ್ತರ ಪ್ರದೇಶದಿಂದ ಅತ್ಯುನ್ನತ ವಿಶ್ವ ಭಾರತಿ ಪ್ರಶಸ್ತಿಯನ್ನು ಸಹ ನೀಡಲಾಗಿದೆ.

ನೀವು ಅನೇಕ ಪುಸ್ತಕಗಳನ್ನು ಬರೆದಿದ್ದೀರಿ, ಸಂಪಾದಿಸಿದ್ದೀರಿ ಮತ್ತು ಅನುವಾದಿಸಿದ್ದೀರಿ. ಹರಿಯಾಣ ಮಂಡಳಿ ಮತ್ತು ಪತಂಜಲಿ ಪ್ರತಿಷ್ಠಾನ (ಮ.ಪ್ರ) ಮತ್ತು ಕೇಂದ್ರೀಯ ಮಾಧ್ಯಮಿಕ ಶಿಕ್ಷಾ ಬೋರ್ಡ್‌ನ ಪಠ್ಯ ಪುಸ್ತಕಗಳ ತಯಾರಿಕೆಯಲ್ಲಿ ನೀವು ಪ್ರಮುಖ ಪಾತ್ರವನ್ನು ವಹಿಸಿದ್ದೀರಿ. ಅವರು ಆಯುರ್ವೇದ, ಯೋಗ, ಶ್ರೀಮದ್ ಭಗವದ್ಗೀತ, ವೇದಾಂತ, ಜ್ಯೋತಿಷ್ಯ, ಕಲಾ, ಸುಭಾಷಿತ, ಮಹಾಭಾರತ, ರಾಮಾಯಣ, ರಘುವಂಶ, ವಾಸ್ತು ಶಾಸ್ತ್ರ, ಭಾರತೀಯ ಗಣಿತ, ಕಲೆ, ಕಾನೂನು, ಆಡಳಿತ ಮತ್ತು ನ್ಯಾಯ ದರ್ಶನದ 48 ಪುಸ್ತಕಗಳ ಸರಣಿಯ ಮುಖ್ಯ ಸಂಪಾದಕರಾಗಿದ್ದಾರೆ. ಭಾರತೀಯ ತತ್ವಶಾಸ್ತ್ರ, ಭಾರತೀಯ ಶಿಕ್ಷಣ ವ್ಯವಸ್ಥೆ ಮತ್ತು ಭಾರತೀಯ ಜ್ಞಾನ-ವಿಜ್ಞಾನದ ಮೂಲಭೂತ ಚಿಂತನೆಯ ಜೊತೆಗೆ, ಭಾರತೀಯ ಭಾಷೆಗಳ ಉನ್ನತಿಯ ಕೆಲಸಕ್ಕಾಗಿ ನಿರಂತರ ಸಮರ್ಪಣೆಯು ನಿಮ್ಮನ್ನು ಶಿಕ್ಷಣ ಜಗತ್ತಿನಲ್ಲಿ ಅನನ್ಯವಾಗಿಸುತ್ತದೆ. ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಈ ನಿಮ್ಮ ಸಾಧನೆಗಳಿಗಾಗಿ ನಿಮ್ಮನ್ನು ಅಭಿನಂದಿಸುತ್ತದೆ ಮತ್ತು ನಿಮ್ಮ ದೀರ್ಘ ಮತ್ತು ಆರೋಗ್ಯಕರ ಜೀವನಕ್ಕಾಗಿ ದೇವರನ್ನು ಪ್ರಾರ್ಥಿಸುತ್ತದೆ,

## ಗೌರವಾನ್ವಿತ ಡಾ॥ ಎಮ್. ಕೆ. ಶ್ರೀಧರ್



ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳ ಬೋಧಕರು, ಸಂಶೋಧನೆ, ಸಂಶೋಧನೆ-ನಿರ್ದೇಶನ, ನಿರ್ವಹಣೆ, ಶಿಕ್ಷಣ ನೀತಿ ರಚನೆ ಇತ್ಯಾದಿ ಕೆಲಸಗಳಲ್ಲಿ ನಿರಂತರವಾಗಿ ತೊಡಗಿಸಿ ಕೊಂಡಿದ್ದಾರೆ, ಶಿಕ್ಷಣ ಕಾರ್ಯಕರ್ತ, ರಾಷ್ಟ್ರೀಯ ವಿಚಾರಧಾರೆಯ ಪ್ರಬಲ ಪ್ರವರ್ತಕರು, ವಿದ್ವಾಂಸರು, ಭಾರತೀಯ ಜ್ಞಾನ ಸಂಪ್ರದಾಯದ ಗಂಭೀರ ಚಿಂತಕರಾದ ಡಾ॥ ಎಮ್. ಕೆ. ಶ್ರೀಧರ್ ಜಿ ಯವರಿಗೆ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು 'ಶಿಕ್ಷಾ ಭೂಷಣ' ಅಖಿಲ ಭಾರತ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲು ಹೆಮ್ಮೆಪಡುತ್ತಿದೆ.

ಪ್ರೊಫೆಸರ್ ಶ್ರೀಧರ್ ಅವರು ವಾಣಿಜ್ಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ನಂತರ, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕದಿಂದ ಪಿಎಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ. ನಂತರ ಎರಡು ದಶಕಗಳ ಕಾಲ ಬೆಂಗಳೂರಿನ ವಿಜಯ ಮಹಾವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗದ ಹಿರಿಯ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದರು. ಸುದೀರ್ಘ ಬೋಧನಾ ಅನುಭವದ ನಂತರ ಅವರು ಬೆಂಗಳೂರು ವಿಶ್ವವಿದ್ಯಾಲಯದ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದಲ್ಲಿ ಕ್ರಮವಾಗಿ ರೀಡರ್, ಪ್ರೊಫೆಸರ್, ಮ್ಯಾನೇಜ್‌ಮೆಂಟ್ ಸ್ಟಡೀಸ್ ಡೀನ್ ಮತ್ತು ನಂತರ ಸಂಸ್ಥೆಯ ನಿರ್ದೇಶಕರಾಗಿ ಹಲವಾರು ಗಮನಾರ್ಹ ಕಾರ್ಯ ಯೋಜನೆಗಳನ್ನು ಮಾಡಿದರು. ನಿಮ್ಮ ಬೋಧನಾ ಕಾರ್ಯದ ಜೊತೆಗೆ ನೀವು ಅನೇಕ ವಿದ್ಯಾರ್ಥಿಗಳಿಗೆ ಎಂ.ಫಿಲ್ ನೀಡಿದ್ದೀರಿ ಮತ್ತು ಪಿ.ಎಚ್.ಡಿ. ಸಂಶೋಧನಾ ಕಾರ್ಯದಲ್ಲಿ ಮಾರ್ಗದರ್ಶನ ಮಾಡಿದ್ದೀರಿ. ಅಧ್ಯಯನ ಮತ್ತು ಅಧ್ಯಾಪನದೊಂದಿಗೆ ನೀವು ಸುಮಾರು 30 ಸಂಶೋಧನಾ ಪ್ರಬಂಧಗಳನ್ನು ಮತ್ತು 11 ಶೈಕ್ಷಣಿಕ ಸಂಶೋಧನಾ ಕಾರ್ಯವನ್ನು ಮಾಡಿದ್ದೀರಿ, ಅವರ ಜೀವನ ಮತ್ತು ಅವರ ಪ್ರಮುಖ ಸಾಧನೆಗಳ ವಿವರಗಳನ್ನು ಸಹಸ್ರ ಪದಿ ಮತ್ತು ಉಷಾಕಿರಣ ಮತ್ತು ಕರ್ಮವೀರದಲ್ಲಿ ಪ್ರಕಟಿಸಲಾಗಿದೆ. ಶಿಕ್ಷಣ ಜಗತ್ತಿನಲ್ಲಿ ನಿಮ್ಮ ಸಾಧನೆಗಳನ್ನು ಉದಯ ಟಿವಿ ಮತ್ತು ಕರ್ನಾಟಕ ಸರ್ಕಾರದ ಮಾಧ್ಯಮ ಮತ್ತು ಪ್ರಸಾರ ಇಲಾಖೆಯು ಸಾಧಕರು ಎಂದು ಪ್ರಸಾರ ಮಾಡಿರುವುದು ಉಲ್ಲೇಖನೀಯ.

ಡಾ॥ ಶ್ರೀಧರ್‌ರವರು ಕರ್ನಾಟಕ ಜ್ಞಾನ ಆಯೋಗದ ಸದಸ್ಯರು, ರಾಜ್ಯ ಇನ್ನೋವೇಶನ್ ಕೌನ್ಸಿಲ್, ಕರ್ನಾಟಕ ಸರ್ಕಾರದ ಸದಸ್ಯರು, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಿಂದ ನಾಮನಿರ್ದೇಶನಗೊಂಡ ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಸದಸ್ಯರು, ಅಖಿಲ ಭಾರತ ನಿರ್ವಹಣಾ ಅಧ್ಯಯನ ಮಂಡಳಿ (AICTE) ಸದಸ್ಯರು, ಕಾರ್ಯಕಾರಿ ಮಂಡಳಿ, ಗುಜರಾತ್ ಕೇಂದ್ರೀಯ ವಿಶ್ವವಿದ್ಯಾಲಯದ, ಗೌರವ ಅಧ್ಯಕ್ಷರು, ಶಿಕ್ಷಣ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರ (CESS), ಬೆಂಗಳೂರಿನ ನಾಮನಿರ್ದೇಶಿತ ಸದಸ್ಯರು, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಆಯೋಗದ ಕರಡು ಸಮಿತಿ (ಡಾ. ಕೆ. ಕಸ್ತೂರಿರಂಗನ್) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಕರ್ನಾಟಕ ವಿಭಾಗ ಉಪಾಧ್ಯಕ್ಷರು, ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ಸದಸ್ಯರಾಗಿ ನಮಗೆ ಮಾರ್ಗದರ್ಶನ ನೀಡುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿನ ಅವರ ಮಹತ್ವದ ಕೊಡುಗೆ ಮತ್ತು ಸಾಧನೆಗಳಿಂದ ಪ್ರಭಾವಿತರಾದ ಕರ್ನಾಟಕ ರಾಜ್ಯ ಸರ್ಕಾರದ 'ಕರ್ನಾಟಕ ರಾಜ್ಯೋತ್ಸವ ಸಮ್ಮಾನ್', ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ಸನ್ಮಾನ, ಭಾರತೀಯ ವಿಜ್ಞಾನ ಕಾಂಗ್ರೆಸ್‌ನಿಂದ ಜನರಲ್ ಅಧ್ಯಕ್ಷರ ಚಿನ್ನದ ಪದಕ ಇತ್ಯಾದಿ ಪದವಿಗಳಿಂದ ಅಲಂಕರಿಸಲಾಗಿದೆ. ಭಾರತೀಯ ಜೀವನ ದೃಷ್ಟಿ ನಿರ್ವಹಣೆ ಮತ್ತು ಸಂಶೋಧನೆ, ಶಿಕ್ಷಣ ನೀತಿ ರಚನೆಯಲ್ಲಿ ನೀಡಲಾದ ಮಾರ್ಗದರ್ಶನವು ನಿಮ್ಮನ್ನು ವಿಶೇಷ ಮತ್ತು ಗೌರವಾನ್ವಿತ ಶಿಕ್ಷಕರನ್ನಾಗಿ ಮಾಡುತ್ತದೆ. ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ಶಿಕ್ಷಣ ಜಗತ್ತಿನಲ್ಲಿ ನಿಮ್ಮ ಖ್ಯಾತಿಗಾಗಿ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತದೆ ಮತ್ತು ದೇವರು ನಿಮಗೆ ದೀರ್ಘ ಮತ್ತು ಆರೋಗ್ಯಕರ ಜೀವನವನ್ನು ದಯಪಾಲಿಸಲಿ ಎಂದು ಹಾರೈಸುತ್ತದೆ.

●

# ಅಧಿವೇಶನದ ಬಗ್ಗೆ ಕಾರ್ಯಕರ್ತರ ಅನುಭವಗಳು

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ನವೆಂಬರ್ 11, 12 ಮತ್ತು 13ರಂದು ನಡೆದ ಸಮ್ಮೇಳನದಲ್ಲಿ ನಾನು ಹಾಗೂ ನಮ್ಮ ಸಂಘದ ಸದಸ್ಯರೆಲ್ಲರೂ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಜೊತೆಗೆ ಸಮ್ಮೇಳನದಲ್ಲಿ ನಡೆದ ರಾಷ್ಟ್ರೀಯ ಶಿಕ್ಷಣ ನೀತಿ 2020, ನಾನಾ ರಾಜ್ಯಗಳ ಶಿಕ್ಷಣ ವ್ಯವಸ್ಥೆ, ಎನ್.ಪಿ.ಎಸ್ ವಿಷಯ, ಶಿಕ್ಷಕರ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ನಾನಾ ರಾಜ್ಯಗಳಿಂದ ಬಂದಿರುವ ಎಲ್ಲರಿಗೂ ಉಳಿದುಕೊಳ್ಳುವ, ಚಹಾ, ಅಲ್ಪಹಾರ, ಊಟವನ್ನು ಅಚ್ಚುಕಟ್ಟಾಗಿ ಮಾಡಿರುವುದನ್ನು ನಾನು ನೋಡಿದೆ. ನಾನು ನನ್ನ ತಂಡ ಹರ್ಷವನ್ನು ವ್ಯಕ್ತಪಡಿಸುತ್ತೇವೆ.

**ಶ್ರೀ ಪ್ರಕಾಶ್,** ಮಾಧ್ಯಮಿಕ ಶಿಕ್ಷಕರ ಸಂಘ,
ಅಧ್ಯಕ್ಷರು, ಗುರುಮಠಕಲ್ ತಾಲ್ಲೂಕು

ಕರ್ನಾಟಕದಲ್ಲಿ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಮಹಾವಿದ್ಯಾಲಯಗಳ ಸಂಘದ ನೇತೃತ್ವದಲ್ಲಿ 8ನೇ ರಾಷ್ಟ್ರೀಯ ಅಧಿವೇಶನವನ್ನು ಎಲ್ಲಾ ಕಾರ್ಯಕರ್ತರ ಒಕ್ಕೂರಲಿನ ಪ್ರಯತ್ನದಿಂದ ಒಂದು ರಾಷ್ಟ್ರ ಕಾರ್ಯವನ್ನು ನಿರ್ವಿಘ್ನವಾಗಿ ಯಶಸ್ವಿಗೊಳಿಸಿದ್ದೇವೆಂಬ ಆತ್ಮತೃಪ್ತಿ ನೀಡಿದೆ. ಅಧಿವೇಶನದ ಯಶಸ್ವಿಗಾಗಿ ಕೆಲಸ ಕಾರ್ಯಗಳನ್ನು ವಿವಿಧ ವಿಭಾಗಗಳನ್ನಾಗಿಸಿ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗಿತ್ತು. ಅದರಂತೆ ನನ್ನ ಪಾಲಿಗೆ ನಿರ್ಮಾಣ ಕಾರ್ಯದ ಜವಾಬ್ದಾರಿ ಬಂದಿತ್ತು. ಮೊದಮೊದಲಿಗೆ ನಿರ್ಮಾಣದಲ್ಲಿ ನನ್ನದೇನು ಹೆಚ್ಚಿನ ಪಾತ್ರವಿರುವುದಿಲ್ಲ, ಎಲ್ಲಾ ನಿರ್ಮಾಣದ ಕೆಲಸವನ್ನು ಗುತ್ತಿಗೆದಾರರೇ ನಿರ್ವಹಿಸುತ್ತಾರೆ ಎಂದುಕೊಂಡಿದ್ದೆ. ಆದರೆ ನಂತರ ಆದ ಅನುಭವವೇ ಬೇರೆ. ಅದೊಂದು ದೊಡ್ಡಸವಾಲಾಗಿತ್ತು. ಏಕೆಂದರೆ ಜನಸೇವಾ ವಿದ್ಯಾಕೇಂದ್ರದಲ್ಲಿ ಲಭ್ಯವಿರುವ ಮೈದಾನದ ಜಾಗದೊಳಗೆ ಸುಮಾರು ನಾಲ್ಕು ಸಾವಿರ ಶಿಕ್ಷಕರಿಗೆ ಅವಶ್ಯವಿರುವ ವಿವಿಧ ಮಂಟಪಗಳನ್ನು ಯೋಜಿಸಿ ನಿರ್ಮಾಣ ಮಾಡುವುದು ಸವಾಲಾಗಿತ್ತು. ಈ ಸವಾಲನ್ನು ಸ್ವೀಕರಿಸಿದ ಶ್ರೀ ಅನಿಲ್ ಭಾಸ್ಕರನ್ ಎಂಬ ಇಂಜಿನಿಯರ್‌ರವರ ಕಲ್ಪನೆ ಮತ್ತು ಪರಿಶ್ರಮ ಒಂದು ಹೊಸ ಲೋಕವನ್ನೇ ಸೃಷ್ಟಿಸಿತ್ತು. ಇದಕ್ಕೆ ಪೂರಕ ಎಂಬಂತೆ ಜನಸೇವಾ ವಿದ್ಯಾ ಕೇಂದ್ರದ ಮುಖ್ಯಸ್ಥರಾದ ಶ್ರೀ ನಿರ್ಮಲ್ ಜಿ, ನಟರಾಜ್ ಜಿ ರವರ ಮಾರ್ಗದರ್ಶನ ಹಾಗೂ ಅಲ್ಲಿಯ ಎಲ್ಲಾ ಸಿಬ್ಬಂದಿಯ ಸಹಕಾರ ಅಧಿವೇಶನದ ಕಾರ್ಯಕ್ಕೆ ಲಭಿಸಿತ್ತು. ಹಾಗೆಯೇ ಅಧಿವೇಶನ ಯಶಸ್ಸುಗೊಳಿಸುವ ಸಂಕಲ್ಪದಿಂದ ಸಂಪೂರ್ಣ ನೇತೃತ್ವ ವಹಿಸಿಕೊಂಡ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮಣ್‌ಜಿಯವರು ಕೈಗೊಂಡ ಹಲವಾರು ಬೈಠಕ್‌ಗಳಲ್ಲಿನ ಮಾರ್ಗದರ್ಶನ ಅಭೂತಪೂರ್ವವಾಗಿತ್ತು. ದೇಶದಿಂದ ಕರ್ನಾಟಕಕ್ಕೆ ಬರಲಿರುವ ಶಿಕ್ಷಕರ ಆತಿಥ್ಯವನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳಬೇಕೆಂಬ ಶ್ರೀ ಕೃ. ನರಹರಿಜೀಯವರ ಕಳಕಳಿ ನನ್ನ ಕಳಕಳಿಯಾಗಿ ಪರಿವರ್ತನೆಗೊಂಡಿತ್ತು. " ಅಧಿವೇಶನ ಹೇಗೋ ಆಗುತ್ತದೆ, ಆದರೆ ಇಡೀ ದೇಶದಿಂದ ಬರುವ ಶಿಕ್ಷಕರ ಮನದಲ್ಲಿ ಬಹಳ ದಿನಗಳ ಕಾಲ ಈ ಅಧಿವೇಶನದ ನೆನಪು ಉಳಿಯಬೇಕು ಹಾಗೂ ಶಿಕ್ಷಕ ಸಂಘದ ಕಾರ್ಯ ದೇಶದ ಕಾರ್ಯ–ಈಶನ ಕಾರ್ಯ ಇದನ್ನು ಬೆಳೆಸುವ ನಿಟ್ಟಿನಲ್ಲಿ ಬಂದ ಶಿಕ್ಷಕರು ಹೊಸ ಹುಮ್ಮಸ್ಸಿನೊಂದಿಗೆ ಅಧಿವೇಶನ ಮುಗಿಸಿಕೊಂಡು ಇಲ್ಲಿಂದ ತೆರಳಬೇಕು" ಎಂಬ ಶ್ರೀ ಮಹೇಂದ್ರಕಪೂರ್‌ಜಿ ಮತ್ತು ಜಿ. ಲಕ್ಷ್ಮಣ್ ಜೀರವರ ಮಾತುಗಳು ನನಗೆ ಕೆಲಸದಲ್ಲಿ ಬೇಸರವಾದಾಗ ಸ್ಫೂರ್ತಿಯಾಗಿ ಮನದಲ್ಲಿ ಮರುಕಳಿಸುತ್ತಿದ್ದವು. ಆದ್ದರಿಂದ ನನ್ನ ಜವಾಬ್ದಾರಿ ಕೇವಲ ನಿರ್ಮಾಣ ಕೆಲಸವಷ್ಟೇ ಅಲ್ಲ, ಬಿಟ್ಟ ಸ್ಥಳ ತುಂಬಿ ಎಂಬಂತೆ ಅಧಿವೇಶನದಲ್ಲಿ ನನ್ನ ಗಮನಕ್ಕೆ ಬಂದ ಯಾವ ಕೆಲಸಕ್ಕೆ ಅಡಚಣೆಯಾಗಿರುತ್ತಿತ್ತೋ ಆ ಕೆಲಸವನ್ನು ಮನಃಪೂರ್ವಕವಾಗಿ ನಿಭಾಯಿಸಿದ್ದೇನೆ. ನಾನು ಕೇವಲ ಎಲ್ಲರ ಮಧ್ಯದಲ್ಲಿ ಕೊಂಡಿಯಾಗಿ ಕೆಲಸವನ್ನು ನಿರ್ವಹಿಸಿದೆ ಅಷ್ಟೇ ವಿನಃ ವಿಶೇಷವಾದದ್ದೂ ಏನೂ ಇಲ್ಲ. ಇದರಿಂದ ನನಗೆ ಹೊಸ ಅನುಭವದೊಂದಿಗೆ ಸಾರ್ಥಕ ಭಾವ ಮೂಡಿತು. ಕಾರ್ಯಕ್ರಮದ ದೊಡ್ಡಮಂಟಪ, ಪ್ರದರ್ಶನ, ಮಾರಾಟ ಮಳಿಗೆಗಳು, ಸೆಲ್ಫಿ ಪಾಯಿಂಟ್, ಊಟದ ಮಂಟಪ, ಪಾರ್ಕಿಂಗ್ ವ್ಯವಸ್ಥೆ ವಿಶೇಷವಾಗಿ ಪ್ರದರ್ಶನದಲ್ಲಿ ಒಂದೇ ರಾತ್ರಿಯಲ್ಲೇ ಬೆಳೆದು ನಿಂತಿದ್ದ ಮರಗಳು ಎಲ್ಲವೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದು ಸಂತಸ ತಂದಿದೆ. ಈ ಕಾರ್ಯಕ್ಕೆ ಕೈ ಜೋಡಿಸಿದ ಶ್ರೀ ಸಂಗಮೇಶ್, ಜಾನ್ಸಿ ಮೇಡಂ, ಶ್ರೀ ವೃಷಭೇಂದ್ರಸ್ವಾಮಿ, ಶ್ರೀ ಗಜಾನನ ಹಾಗೂ ಕಲಾತ್ಮಕವಾಗಿ ಅಂದಗೊಳಿಸಿದ ಚಿತ್ರಕಲಾ ಶಿಕ್ಷಕರ ತಂಡದವರ ಶ್ರಮವನ್ನು ಮರೆಯುವಂತಿಲ್ಲ.

**ಶ್ರೀಯುತ ಗಂಗಾಧರ ಆಚಾರಿ,**
ಸಹಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ

ಮೂರು ದಿನದ ಅಧಿವೇಶನ ನೂರು ನೆನಪುಗಳನ್ನು, ಜ್ಞಾನದ ಅಮೃತವನ್ನು ಬೆಂಗಳೂರಿನಿಂದ ಸುರಪುರಕ್ಕೆ ಹೊತ್ತು ತರುವಂತೆ ಮಾಡಿತು. "ವಸುದೈವ ಕುಟುಂಬಕಂ" ಎನ್ನುವಂತೆ ಭಾರತದ ಎಲ್ಲ ರಾಜ್ಯದ ಪ್ರತಿನಿಧಿಗಳೊಂದಿಗೆ ನಮ್ಮ ಸಮಾಗಮ ವರ್ಣನಾತೀತವಾಗಿತ್ತು. ಗೋಷ್ಠಿಗಳು, ಬೈಠಕ್‌ಗಳು ಅತ್ಯಂತ ಜ್ಞಾನವರ್ಧಕ ಹಾಗೂ ವೈಚಾರಿಕತೆಯಿಂದ ಕೂಡಿದ್ದು, ವಿಚಾರ ಮಂಥನಕ್ಕೆ ಅವಕಾಶ ನೀಡಿದವು. ಸಾಂಸ್ಕೃತಿಕ ಕಾರ್ಯಕ್ರಮಗಳು ಭಾರತೀಯ ಕಲೆ, ಸಂಸ್ಕೃತಿ, ವೈಭವವನ್ನು ಪ್ರತಿನಿಧಿಸುವಂತಿದ್ದವು. ನನಗೆ ಇಷ್ಟವಾದ ವಿಚಾರವೆಂದರೆ ಮಹಿಳಾ ಬೈಠಕ್‌ನಲ್ಲಿ ಭಾರತದ ಎಲ್ಲಾ ರಾಜ್ಯಗಳಲ್ಲಿ ಮಹಿಳೆಯರ ಸ್ಥಾನಮಾನ ಹೇಗಿದೆ? ಎನ್ನುವುದನ್ನು ತಿಳಿದುಕೊಂಡಿದ್ದು. ಸಂಘಕ್ಕಾಗಿ ಸಹಾಯ, ಸಹಕಾರ, ನಿಸ್ವಾರ್ಥ ಸೇವೆ ಯಾವ ರೀತಿ ಮಾಡಬೇಕೆಂದು ಈ ಅಧಿವೇಶನದಿಂದ ನನಗೆ ಅರಿವಾಯಿತು. ಈ ಅಧಿವೇಶನಕ್ಕಾಗಿ ಶ್ರಮಿಸಿದ ಎಲ್ಲರಿಗೂ ನನ್ನ ಧನ್ಯವಾದಗಳು. "ಇಂಡಿಯಾದಿಂದ ಭಾರತದ ಕಡೆಗೆ ನಮ್ಮ ನಡಿಗೆ".

**ಶ್ರೀಮತಿ ಸರಸ್ವತಿ ಸುರೇಶ,** ಜಿಲ್ಲಾ ಮಹಿಳಾ ಪ್ರಮುಖರು,
ಕ.ರಾ.ಮಾ.ಶಿ.ಸಂಘ, ಯಾದಗಿರಿ ಜಿಲ್ಲೆ

ನನಗೆ ಸುಮಾರು ನಾಲ್ಕು ರಾಷ್ಟ್ರೀಯ ಸಮ್ಮೇಳನದಲ್ಲಿ ಅತಿಥಿಯಾಗಿ ಭಾಗವಹಿಸಿದ ಅನುಭವ ಇದೆ ಆದರೆ ಈ ಸಮ್ಮೇಳನದ ವಿಶೇಷತೆ ನಾನು ಎಂದು ಮರೆಯಲಾಗುವುದಿಲ್ಲ ಏಕೆಂದರೆ ನಾವು ಆತಿಥ್ಯವನ್ನು

ಪುಟ 10 ಕ್ಕೆ ➤

➢ ಪುಟ 5 ರಿಂದ.....

ನಾಲ್ಕು ಅಂತಸ್ತಿನ ಬಿಲ್ಡಿಂಗ್‌ನಲ್ಲಿ ರಾತ್ರಿ 1.30 ಕ್ಕೆ ಪ್ರತಿನಿಧಿಗಳಿಗೆ ಒದಗಿಸಿ ಅವರನ್ನು ಮಲಗಿಸಿದಾಗ ಆದ ಆನಂದ ಹೇಳತೀರದು.

ಮೊದಲನೇ ದಿನದ ಊಟದ ವ್ಯವಸ್ಥೆಯಲ್ಲಿ ಕಂಡುಬಂದ ಸ್ವಲ್ಪ ಗಡಿಬಿಡಿಯು ತುರ್ತುಸಂದರ್ಭಗಳನ್ನು ಎದುರಿಸುವುದು ಹೇಗೆ ಎಂಬುದನ್ನು ಕಾರ್ಯಕರ್ತರಿಗೆ ತರಬೇತಿ ನೀಡಿದಂತಿತ್ತು ಹಾಗೂ ಮುಂದಿನ ದಿನಗಳು ಅಚ್ಚುಕಟ್ಟಾದ ಊಟದ ವ್ಯವಸ್ಥೆ ಮಾಡಲು ನಾಂದಿ ಹಾಡಿತು.

ಪ್ರಬಂಧಕರನೇಕರಿಗೆ ರಾತ್ರಿಯ ನಿದ್ದೆ ಕುರ್ಚಿಯ ಮೇಲೆ, ಸೋಪಾಸೆಟ್ ಮೇಲೆ. ಒಂದು ಸಣ್ಣ ಚಾಪೆಯ ಮೇಲೆ ಇಲ್ಲವೇ ಅಲ್ಲಿಯೇ ಇದ್ದ ಟೇಬಲ್ ಮೇಲೆ ಒಂದು ಗಂಟೆ ಮಲಗಿದರು ಎಂದರೆ ಅದೇ ಬಹಳ ಹೊತ್ತು ಮಲಗಿದಂತೆ ಆಗುತ್ತಿತ್ತು. ನಿದ್ದೆ ಸಣ್ಣದಾಗಿತ್ತು, ಹಗಲು ದೊಡ್ಡದಾಗಿತ್ತು. ಆದರೂ ಸಮಯ ಸಾಲುತ್ತಿರಲಿಲ್ಲ ಎನ್ನುವ ಅಭಿಪ್ರಾಯ ಅನೇಕ ಕಾರ್ಯಕರ್ತರದಾಗಿತ್ತು.

ಈ ಬಾರಿಯ ಅಧಿವೇಶನದ ವಿಶೇಷ ಅಂಶಗಳಲ್ಲಿ ಒಂದು ಸೆಲ್ಫಿ ಪಾಯಿಂಟ್. ದೇಶದ ಮೂಲೆ-ಮೂಲೆಗಳಿಂದ ಬಂದ ಪ್ರತಿನಿಧಿಗಳೆಲ್ಲರೂ ಈ ಸೆಲ್ಫಿ ಪಾಯಿಂಟ್‌ನಲ್ಲಿ ನಿಂತು ಪೋಟೋ ಕ್ಲಿಕ್ಕಿಸಿ ಕೊಂಡವರೆ.

ರಾತ್ರಿ ಎರಡು ಗಂಟೆಯವರೆಗೂ ಬೈಠಕ್ ಮಾಡಿ ಆ ಚಳಿಯಲ್ಲಿಯೇ ಐಸ್‌ಕ್ರೀಮ್ ತಿಂದಿದ್ದು ಒಂದು ವಿಶಿಷ್ಟ ರೀತಿಯ ಆನಂದದ ಅನುಭವವನ್ನು ನೀಡುತ್ತಿತ್ತು.

ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು, ಹಿರಿಯ ರಾಜಕಾರಣಿ ಮಾಜಿ ಮುಖ್ಯಮಂತ್ರಿಗಳು ಆದ ಶ್ರೀ ಯಡಿಯೂರಪ್ಪನವರು, ರಾಜ್ಯದ ಉನ್ನತ ಶಿಕ್ಷಣ ಮಂತ್ರಿ ಅಶ್ವಥ್ ನಾರಾಯಣ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂತ್ರಿಗಳಾದ ಬಿ. ಸಿ ನಾಗೇಶ್ ಅವರು, ಉಳಿದಂತೆ ಮಂತ್ರಿಗಳು, ಲೋಕಸಭೆಯ ಸಂಸದರು, ವಿಧಾನಸಭೆಯ ಮತ್ತು ವಿಧಾನಪರಿಷತ್ ಸದಸ್ಯರು ನಾಡಿನ ಶಿಕ್ಷಣ ತಜ್ಞರು ಮತ್ತು ಅನೇಕ ಇಲಾಖೆಗಳು ಭಾಗವಹಿಸಿದ್ದು ವಿಶೇಷವಾಗಿತ್ತು.

**ವಿಶೇಷ ಸಂಚಿಕೆ:**

ಕಳೆದ 37 ವರ್ಷಗಳಿಂದ ನಿರಂತರವಾಗಿ ನಡೆಯುತ್ತಾ ಬಂದಿರುವ ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯು "ಅಮೃತ ಕುಂಭಕ್ಕೆ ಸ್ವರ್ಣ ಲೇಪನದ ಸಿದ್ಧತೆ" ಎನ್ನುವ ಹೆಸರಿನಲ್ಲಿ ವಿಶೇಷ ಸಂಚಿಕೆಯನ್ನು ಹೊರತಂದಿತು. ನಾಡಿನ ಪ್ರಮುಖ ವ್ಯಕ್ತಿಗಳು, ಚಿಂತಕರು ಈ ಪತ್ರಿಕೆಗೆ ಲೇಖನಗಳನ್ನು ಬರೆದುಕೊಟ್ಟರು. ಸಂಪಾದಕ ಮಂಡಳಿಯಲ್ಲಿ ಶ್ರೀ ಹೆಚ್ ನಾಗಭೂಷಣಜೀ, ಜೆ.ಎಂ ಜೋಷಿ, ಸಂದೀಪ್ ಬೂದಿಹಾಳ್, ಚಿದಾನಂದ ಪಾಟೀಲ್, ಶ್ರೀಮತಿ ಮಮತಾ ಡಿ.ಕೆ, ನಂ. ನಾಗಲಕ್ಷ್ಮಿ, ಆರ್ ಸೀತಾಲಕ್ಷ್ಮಿ, ಎನ್. ನಾಗರಾಜ್, ಸಾಂವಶಿ ಮತ್ತು ವರಲಕ್ಷ್ಮಿ ಕೆ.ಎನ್ ಅವರ ಕೊಡುಗೆಯನ್ನು ನಾವು ಇಲ್ಲಿ ಸ್ಮರಿಸಲೇಬೇಕು. ಈ ವಿಶೇಷ ಸಂಚಿಕೆಯು ಸಂಗ್ರಹ ಯೋಗ್ಯವಾಗಿದೆ.

ಈ ಅಧಿವೇಶನ ಅನೇಕ ವೈಶಿಷ್ಟ್ಯಗಳೊಂದಿಗೆ ಮತ್ತು ಸುಂದರ ಅನುಭವಗಳೊಂದಿಗೆ ಸಮಾಪ್ತಿಯಾಯಿತು.

- ನಮ್ಮೆಲ್ಲರ ಕಾರ್ಯಕ್ಷಮತೆಯನ್ನು ಒರೆಗಲ್ಲಿಗೆ ಹಚ್ಚಿತು.
- ಅನೇಕ ಪ್ರಾಯೋಗಿಕ ಅನುಭವಗಳನ್ನು ನೀಡಿತು.
- ಜಿ. ಲಕ್ಷ್ಮಣ್ ಜಿಯವರೊಂದಿಗೆ ಕೆಲಸ ಮಾಡುವುದು, ಒಂದು ಪ್ರಯೋಗಶಾಲೆಯಲ್ಲಿ ಕಾರ್ಯ ಮಾಡಿದ ಅನುಭವ ನೀಡಿತು.
- ಕಾರ್ಯಕರ್ತರಿಗೆ ಪ್ರೇರಣಾದಾಯಕವಾಗಿತ್ತು.
- ಸಮ್ಮೇಳನದ ಸಂದರ್ಭದಲ್ಲಿ ಅನೇಕ ಕಾರ್ಯಗಳು ತುಂಬಾ ಕಠಿಣ ಎನಿಸುತ್ತಿದ್ದವು. ಆದರೆ ಇಂದು ಅವುಗಳು ಕಾರ್ಯಕರ್ತರಿಗೆ ಕಠಿಣತೆಯನ್ನು ಎದುರಿಸುವ ಎದೆಗಾರಿಕೆ ಕಲಿಸಿದವು.
- ಸಂಪನ್ಮೂಲ ಸಂಗ್ರಹ ಅನೇಕರಿಗೆ ಹೊಸದಾಗಿತ್ತು. ಅಧಿವೇಶನ ಸಂಗ್ರಹದ ಮಹತ್ವವನ್ನು ಮನವರಿಕೆ ಮಾಡಿತು.
- ವಸ್ತುಗಳನ್ನು ಜೋಡಿಸುವುದು ಮತ್ತು ವ್ಯಕ್ತಿಗಳ ಮನಸ್ಸನ್ನು ಜೋಡಿಸುವುದು ಒಂದು ಕಲೆಯೆನ್ನುವುದನ್ನು ಕಲಿಸಿತು.

ಕೊನೆಯಲ್ಲಿ ಪ್ರಬಂಧಕರಿಗೆ ಅಭಿನಂದನೆ ಸಲ್ಲಿಸುವುದಕ್ಕಾಗಿ ಸಮ್ಮೇಳನದ 10 ದಿನಗಳ ನಂತರ ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ಸಮಾರಂಭ ಎಲ್ಲರಲ್ಲೂ ಏನೋ ಒಂದು ಸಾಧಿಸಿದ ಧನ್ಯತಾ ಭಾವನೆಯನ್ನು ನೀಡಿತು.

ಈ ಅಧಿವೇಶನ ಅನೇಕ ಅನುಭವಗಳೊಂದಿಗೆ ನಮಗೆಲ್ಲಾ ಕಾರ್ಯದ ವಿಸ್ತಾರದ ಗುರಿಯನ್ನು ನೀಡಿದೆ. ಮುಂದಿನ ದಿನಗಳಲ್ಲಿ ಈ ಅಧಿವೇಶನದ ಪ್ರೇರಣೆಯಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತು ಶಿಕ್ಷಕರ ಮಧ್ಯದಲ್ಲಿ ಕಾರ್ಯದ ವಿಸ್ತಾರ ಮತ್ತು ದೃಢತೆಯನ್ನು ಹೆಚ್ಚಿಸಲು ನಾವೆಲ್ಲಾ ಶ್ರಮಿಸೋಣ ಅಲ್ಲವೇ? ●

➢ ಪುಟ 9 ರಿಂದ.....

ಮಾಡಿದ ಶುಭ ಘಳಿಗೆ ಇಷ್ಟೊಂದು ಅಚ್ಚುಕಟ್ಟಾದ, ವ್ಯವಸ್ಥಿತ ಹಾಗೂ ಐತಿಹಾಸಿಕ ಸಮ್ಮೇಳನದಲ್ಲಿ ಭಾಗವಹಿಸಿದ ನಾನೆಲ್ಲ ಧನ್ಯರು. ಅಚ್ಚುಕಟ್ಟಾದ ಭೋಜನ ವ್ಯವಸ್ಥೆ ನಿರ್ವಹಿಸಿದ ಖುಷಿ ನನಗಿದೆ.

**ಶ್ರೀ ಅನಿಲ್ ಕುಮಾರ್ ಬಿರಾದರ್,** ಜಿಲ್ಲಾಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಯಾದಗಿರಿ ಜಿಲ್ಲೆ.

ಇದೊಂದು ಅಭೂತಪೂರ್ವ ಯಶಸ್ವಿ ಸಮ್ಮೇಳನ. ದೇಶ ಸುತ್ತಿ ನೋಡಿ, ಕೋಶ ಓದಿ ನೋಡಿ ಎನ್ನುವ ನುಡಿಯಂತೆ ದೇಶದ ಎಲ್ಲಾ ರಾಜ್ಯಗಳ ಶಿಕ್ಷಕ ಪ್ರತಿನಿಧಿಗಳು ಆಗಮಿಸಿರುವುದರಿಂದ ವಿವಿಧ ಭಾಷೆಗಳ, ಸಂಸ್ಕೃತಿ ಪರಿಚಯದೊಂದಿಗೆ ಇಡೀ ದೇಶ ಸುತ್ತಿ ಬಂದ ಅನುಭವ ನಮಗಾಯಿತು.

ಪ್ರಾರಂಭದಲ್ಲಿ ಭೋಜನ ಹಾಗೂ ವಸತಿ ವ್ಯವಸ್ಥೆಯಲ್ಲಿ ಆಗಿರುವ ಅವ್ಯವಸ್ಥೆಯನ್ನು ಸರಿಪಡಿಸಿಕೊಂಡು ಸಮ್ಮೇಳನ ಮುಗಿಯುವವರೆಗೂ ವ್ಯವಸ್ಥಿತವಾಗಿ, ಯಶಸ್ವಿಯಾಗಿ ನಡೆಸಿಕೊಂಡು ಬಂದಿರುವುದು ನಮ್ಮ ಕಾರ್ಯಕರ್ತರ ಸಂಘಟನಾ ಶಕ್ತಿ ಪ್ರತಿಬಿಂಬಿಸುವಂತಿತ್ತು.

**ಚಂದ್ರಶೇಖರ ಪಾಟೀಲ,** ಜಿಲ್ಲಾ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಕಲಬುರಗಿ ಜಿಲ್ಲೆ. ●

**ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್ ಒಲಸಾಕಿದ್ರೂನೆ - ಮೂಗ್ನಲ್ ಕನ್ನಡ್ ಪದವಾಡ್ತೀನಿ. - ಜಿ ಪಿ. ರಾಜರತ್ನಂ**

# 8ನೇ ರಾಷ್ಟ್ರೀಯ ಅಧಿವೇಶನದ ಚಿತ್ರಗಳು



MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-12-2022
Date of Posting 20th or 21st of every month
Posted at Periodical Rate

# 8ನೇ ರಾಷ್ಟ್ರೀಯ ಅಧಿವೇಶನದ ಚಿತ್ರಗಳು

















IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

**Printed At:** Rashtrotthana Mudranalaya,
'Keshava Shilpa', Kempegowda Nagar, Bengaluru -560 019

**Published By :** Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

**Editor :** J. M. Joshi, Karnataka Rajya Madhyamika Shikshaka Sangha (R.), Bengaluru -20



srushtidesigns@gmail.com